# ಭಾವ ಲಹರಿ

> ಮೀನು ಮರಿ ಉತ್ಪಾದನಾ ಕೇಂದ್ರದಿಂದ ತಂದ ಸಣ್ಣ ಮೀನು ಮರಿಗಳನ್ನು ಫಲಾನುಭವಿಗಳಿಗೆ ಉಚಿತವಾಗಿ ಅಥವಾ ಭಾರಿ ಸಹಾಯಧನದ ರೂಪದಲ್ಲಿ ಒದಗಿಸಲಾಗುತ್ತಿತ್ತು. ಸಣ್ಣ ರೈತರು ತಮ್ಮ ಜಮೀನಿನ ಹೊಂಡಗಳಲ್ಲಿ ಈ ಮರಿಗಳನ್ನು ಪೋಷಿಸಿ ಬೆಳೆಸುತ್ತಿದ್ದರು. ಮೀನುಗಳು ಸ್ವಲ್ಪ ದೊಡ್ಡದಾದ ನಂತರ ದಳಿಗಳ ಹಾವಳಿಯನ್ನು ತಪ್ಪಿಸಿ ಸರಕಾರವೇ ಅವುಗಳನ್ನು ನ್ಯಾಯಯುತ ಬೆಲೆಗೆ ರೈತರಿಂದ ನೇರವಾಗಿ ಖರೀದಿಸುತ್ತಿತ್ತು

## ಈ ಮೀನುಮರಿಗಳ ಕಥೆ ಕೇಳಿ!

ಇತ್ತೀಚೆಗೆ ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ವಿಜಯೇಂದ್ರ ಅವರ ನೇತೃತ್ವದಲ್ಲಿ ನಾವು ಬರ ಅಧ್ಯಯನಕ್ಕೆ ತೆರಳಿದ್ದಾಗ, ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಹಾತಿಕಟ್ಟೆ ಗ್ರಾಮದ ಕಟು ವಾಸ್ತವ ನಮ್ಮ ಕಣ್ಣಿಗೆ ರಾಚಿತು. ಹಿಂದಿನ ಭಾರತೀಯ ಜನತಾ ಪಕ್ಷದ ಸರಕಾರದ ಅವಧಿಯಲ್ಲಿ ಜಾರಿಯಾಗಿದ್ದ ಮೀನುಗಾರಿಕೆ ಯೋಜನೆಯನ್ನು ನಿಲ್ಲಿಸಿ ಅಲ್ಲಿನ ಸಣ್ಣ ಮೀನುಗಾರರಿಗೆ ಇಂದಿನ ಸರಕಾರ ತಡೆದುಕೊಳ್ಳಲಾರದಂತಹ ಬರೆ ನೀಡಿದೆ. ಬಿಜೆಪಿ ಸರಕಾರದಲ್ಲಿ ಇಲ್ಲಿನ ಸಣ್ಣ ರೈತರು ಹಾಗೂ ಪರಿಶಿಷ್ಟ ಪಂಗಡದ ಜನರ ಆರ್ಥಿಕ ಸಬಲೀಕರಣಕ್ಕಾಗಿ ಅತ್ಯುತ್ತಮ ಮೀನುಗಾರಿಕೆ ಯೋಜನೆಯೊಂದನ್ನು ಜಾರಿಗೆ ತರಲಾಗಿತ್ತು.

ಮೀನು ಮರಿ ಉತ್ಪಾದನಾ ಕೇಂದ್ರದಿಂದ ತಂದ ಸಣ್ಣ ಮೀನು ಮರಿಗಳನ್ನು ಫಲಾನುಭವಿಗಳಿಗೆ ಉಚಿತವಾಗಿ ಅಥವಾ ಭಾರಿ ಸಹಾಯಧನದ ರೂಪದಲ್ಲಿ ಒದಗಿಸಲಾಗುತ್ತಿತ್ತು. ಸಣ್ಣ ರೈತರು ತಮ್ಮ ಜಮೀನಿನ ಹೊಂಡಗಳಲ್ಲಿ ಈ ಮರಿಗಳನ್ನು ಪೋಷಿಸಿ ಬೆಳೆಸುತ್ತಿದ್ದರು. ಮೀನುಗಳು ಸ್ವಲ್ಪ ದೊಡ್ಡದಾದ ನಂತರ ದಳಿಗಳ ಹಾವಳಿಯನ್ನು ತಪ್ಪಿಸಿ ಸರಕಾರವೇ ಅವುಗಳನ್ನು ನ್ಯಾಯಯುತ ಬೆಲೆಗೆ ರೈತರಿಂದ ನೇರವಾಗಿ ಖರೀದಿಸುತ್ತಿತ್ತು. ಆ ಬಳಿಕ ಖರೀದಿಸಿದ ಮೀನುಗಳನ್ನು ದೊಡ್ಡ ಜಲಾಶಯಗಳಿಗೆ ಬಿಟ್ಟು, ತದನಂತರ ಆ ಜಲಾಶಯಗಳ ಮೀನುಗಾರಿಕೆಗಾಗಿ ಸರಕಾರವು ಗುತ್ತಿಗೆ ಕರೆಯುವ ಅತ್ಯುತ್ತಮ ಆರ್ಥಿಕ ವ್ಯವಸ್ಥೆಯೊಂದನ್ನು ರೂಪಿಸಿತ್ತು. ಈ ಮಹತ್ವಾಕಾಂಕ್ಷೆಯ ಹಾಗೂ ಜನಪರ ಕಾರ್ಯಕ್ಕಾಗಿ ಅಂದಿನ ಸರಕಾರ ಸುಮಾರು ಎರಡು ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ಮೀಸಲಿಟ್ಟಿತ್ತು.

**ಬಡವರ ಪಾಲಿನ ಸಂಜೀವಿನಿ**

ಈ ಯೋಜನೆಯು ಹಾತಿಕಟ್ಟೆ ಹಾಗೂ ಸುತ್ತಮುತ್ತಲಿನ ನೂರಾರು ಬಡ ಕುಟುಂಬಗಳ ಪಾಲಿಗೆ ಆರ್ಥಿಕ ಸಂಜೀವಿನಿಯಾಗಿತ್ತು. ಮೀನು ಸಾಕಾಣಿಕೆಯನ್ನು ಆಶ್ರಯಿಸಿದ ಸುಮಾರು ನೂರಕ್ಕೂ ಹೆಚ್ಚು ರೈತರು ಹಾಗೂ ಪರಿಶಿಷ್ಟ ಪಂಗಡದ ಕುಟುಂಬಗಳು ತಮ್ಮ ಜಮೀನುಗಳಲ್ಲಿ ಪ್ರತ್ಯೇಕ ಹೊಂಡಗಳನ್ನು ನಿರ್ಮಿಸಿಕೊಂಡು, ಸರಕಾರದ ಸಹಾಯಧನದ ನೆರವಿನಿಂದ ಮೀನು ಕೃಷಿಯನ್ನು ಆರಂಭಿಸಿದರು.

ಬೆಳೆದ ಮೀನುಗಳನ್ನು ಸರಕಾರವೇ ಖುದ್ದಾಗಿ ಖರೀದಿಸಿ ಜಲಾಶಯಗಳಿಗೆ ಬಿಡುವ ವ್ಯವಸ್ಥೆ ಇದ್ದುದರಿಂದ, ಮಾರುಕಟ್ಟೆಯಲ್ಲಿ ಬೆಲೆ ಕುಸಿಯುವ ಆತಂಕ ಸಣ್ಣ ರೈತರಿಗೆ ಇರಲಿಲ್ಲ. ಪ್ರತಿ ಕುಟುಂಬಕ್ಕೂ ಮೀನುಗಾರಿಕೆಯಿಂದ ಖಚಿತ ಹಾಗೂ ನಿರಂತರ ಆದಾಯ ಬರಲಾರಂಭಿಸಿತು. ಮಳೆಯಾಶ್ರಯಿತ ಕೃಷಿ ಹಾಗೂ ದಿನಗೂಲಿಯನ್ನೇ ನಂಬಿ ಬದುಕು ಸವೆಸುತ್ತಿದ್ದ ಈ ಭಾಗದ ಜನರಿಗೆ, ಮೀನುಗಾರಿಕೆಯು ಪರ್ಯಾಯ ಮತ್ತು ಲಾಭದಾಯಕ ಉದ್ಯೋಗವಾಗಿ ಮಾರ್ಪಟ್ಟಿತ್ತು. ಇದರಿಂದಾಗಿ ನೂರಾರು ಕುಟುಂಬಗಳು ಆರ್ಥಿಕ ಭದ್ರತೆಯನ್ನು ಕಂಡುಕೊಂಡು ನೆಮ್ಮದಿಯ ಬದುಕು ಕಟ್ಟಿಕೊಂಡಿದ್ದವು.

ಈ ಅನುದಾನವು ಕೇವಲ ಮೀನು ಮರಿಗಳ ವಿತರಣೆಗೆ ಮಾತ್ರವಲ್ಲದೆ, ಮೀನು ಕೃಷಿಗೆ ಬೇಕಾದ ನೂತನ ತಾಂತ್ರಿಕ ತರಬೇತಿ, ಹೊಂಡಗಳ ನಿರ್ಮಾಣ ಹಾಗೂ ಮೀನುಗಳಿಗೆ ಪೌಷ್ಟಿಕ ಆಹಾರ ಒದಗಿಸಲು ಬಳಕೆಯಾಗಿತ್ತು. ಅಂದರೆ, ಹಾತಿಕಟ್ಟೆಯಲ್ಲಿ ಕೇವಲ ಮೀನು ಸಾಕಾಣಿಕೆ ಮಾತ್ರವಲ್ಲದೆ, ಮೀನುಗಾರಿಕೆಯ ಸುತ್ತ ಒಂದು ಸಂಪೂರ್ಣ ಪರಿಸರ ವ್ಯವಸ್ಥೆಯನ್ನೇ ಅಂದು ಯಶಸ್ವಿಯಾಗಿ ನಿರ್ಮಾಣ ಮಾಡಲಾಗಿತ್ತು.

ಕೃತಕ ಉತ್ಪಾದನಾ ಕೇಂದ್ರದಿಂದ ಹಿಡಿದು ಜಲಾಶಯಗಳ ಗುತ್ತಿಗೆ ಪ್ರಕ್ರಿಯೆಯವರೆಗೆ ಸಂಪೂರ್ಣ ಬೆಂಬಲ ನೀಡುವ ಇಂತಹ ಸಮಗ್ರ ವ್ಯವಸ್ಥೆಯು ಗ್ರಾಮೀಣ ಭಾಗದ ಆರ್ಥಿಕತೆಯ ಚಿತ್ರಣವನ್ನೇ ಬದಲಾಯಿಸುವ ಸಾಮರ್ಥ್ಯ ಹೊಂದಿದೆ ಎನ್ನುವುದಕ್ಕೆ ಹಾತಿಕಟ್ಟೆ ಯೋಜನೆಯ ಯಶಸ್ಸು ಒಂದು ಅತ್ಯುತ್ತಮ ಉದಾಹರಣೆಯಾಗಿತ್ತು.



ದುರ್ಬಲ ವರ್ಗದ ಜನರಿಗೆ ಕೇವಲ ಸಾಲ ಕೊಡುವ ಬದಲು, ಸ್ವಾವಲಂಬಿ ಉದ್ಯೋಗವನ್ನು ಸೃಷ್ಟಿಸಿಕೊಟ್ಟ ಸರಕಾರದ ಈ ಇಚ್ಛಾಶಕ್ತಿಯು ಎಷ್ಟೊಂದು ಕುಟುಂಬಗಳ ಜೀವನಮಟ್ಟವನ್ನು ಶಾಶ್ವತವಾಗಿ ಸುಧಾರಿಸಬಲ್ಲದು ಎಂಬುದನ್ನು ಈ ಮಾದರಿಯು ಸಾಬೀತುಪಡಿಸಿತ್ತು.

**ಮೀನುಗಳಿಗೆ ಯಾರು ಗತಿ?**

ಆದರೆ, ಪ್ರಸ್ತುತ ಸರಕಾರದ ಆಡಳಿತಾತ್ಮಕ ನಿರ್ಲಕ್ಷ್ಯ ಹಾಗೂ ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ಯಶಸ್ವಿ ಯೋಜನೆಯು ಇಂದು ಸಂಪೂರ್ಣವಾಗಿ ಹಾದಿ ತಪ್ಪಿದೆ. ಮೀನುಗಾರರ ಏಳಿಗೆಗಾಗಿ ಬರಬೇಕಾಗಿದ್ದ ಬರೋಬ್ಬರಿ ಎರಡು ಕೋಟಿ ರೂಪಾಯಿಗಳ ಅನುದಾನದ ಕಡತವನ್ನು ಸರಕಾರ ಅನುಮೋದಿಸಲೇ ಇಲ್ಲ. ಕನಿಷ್ಠ ಈ ವರ್ಷವಾದರೂ ನೆರವು ಸಿಗಬಹುದು ಎಂದು ಕಾಯುತ್ತಿದ್ದ ರೈತರಿಗೆ, ಯೋಜನೆಯನ್ನೇ ಸಂಪೂರ್ಣವಾಗಿ ಕೈಬಿಡುವ ಮೂಲಕ ಸರಕಾರವು ಬಹುದೊಡ್ಡ ಆಘಾತ ನೀಡಿದೆ.

ಬಿಕ್ಕಟ್ಟಿಗೆ ಸಿಲುಕಿರುವ ಮೀನುಗಾರರಿಗೆ ಪರ್ಯಾಯ ಮಾರುಕಟ್ಟೆ ಒದಗಿಸುವ, ಅವರ ಕಷ್ಟವನ್ನು ಆಲಿಸುವ ಅಥವಾ ಕನಿಷ್ಠ ಆರ್ಥಿಕ ನೆರವು ನೀಡುವ ಸೌಜನ್ಯವನ್ನೂ ಆಡಳಿತ ಯಂತ್ರ ತೋರುತ್ತಿಲ್ಲ. ಇದು ದುರ್ಬಲ ವರ್ಗದ ಜನರ ಬಗ್ಗೆ ಪ್ರಸ್ತುತ ಸರಕಾರಕ್ಕಿರುವ ದಿವ್ಯ ನಿರ್ಲಕ್ಷ್ಯವನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ.

ಸರಕಾರದ ಈ ಅಮಾನವೀಯ ನಿರ್ಧಾರದಿಂದಾಗಿ ಸೃಷ್ಟಿಯಾದ ಅಲ್ಪಾವಧಿಯ ಪರಿಣಾಮಗಳು ಅತ್ಯಂತ ಭೀಕರವಾಗಿವೆ. ವಾಸ್ತವವಾಗಿ, ಹಾತಿಕಟ್ಟೆ ಪ್ರದೇಶವು ಬರೋಬ್ಬರಿ 50 ಕೋಟಿ ಮೀನುಗಳನ್ನು ಬೆಳೆಸುವ ಬೃಹತ್ ಸಾಮರ್ಥ್ಯವನ್ನು ಹೊಂದಿದೆ. ಹಿಂದಿನ ಸರಕಾರದ ಭರವಸೆಯ ಮೇರೆಗೆ ನೂರಾರು ರೈತರು ಮೀನು ಸಾಕಾಣಿಕೆಗಾಗಿಯೇ ತಮ್ಮ ಜಮೀನುಗಳಲ್ಲಿ ಪ್ರತ್ಯೇಕ ಹೊಂಡಗಳನ್ನು ನಿರ್ಮಿಸಿಕೊಂಡಿದ್ದರು.

ಹಲವು ಯುವಕರು, ಯುವತಿಯರು ಸಾಲ ಮಾಡಿ ತಮ್ಮದೇ ಕಿರು ಉದ್ಯೋಗ ಸೃಷ್ಟಿಸಲು ಸಜ್ಜಾಗಿದ್ದರು. ಸರಕಾರದ ಯೋಜನೆ ನಿಂತುಹೋದಾಗ, ಅನಿವಾರ್ಯವಾಗಿ ತಮ್ಮದೇ ಕೈಯಿಂದ ಹಣ ಹಾಕಿ ಮೀನು ಮರಿಗಳನ್ನು ಖರೀದಿಸಿ ಕೃಷಿ ಮುಂದುವರಿಸಿದರು. ಪ್ರಸ್ತುತ ಈ ಸಣ್ಣ ರೈತರ ಹೊಂಡಗಳಲ್ಲಿ ಸುಮಾರು 8 ಕೋಟಿ ಮೀನುಗಳು ಬೆಳೆದು ನಿಂತಿವೆ.

ಆದರೆ, ಮೀನುಗಳು ಸಂಪೂರ್ಣವಾಗಿ ಬೆಳೆದ ನಂತರ ಸರಕಾರವು ಸೂಕ್ತ ಸಮಯಕ್ಕೆ ಅವುಗಳನ್ನು ಖರೀದಿಸಲು ಮುಂದಾಗಲಿಲ್ಲ. ಮಾರುಕಟ್ಟೆಗಳಲ್ಲಿಯೂ ಸೂಕ್ತ ಬೆಲೆ ಇಲ್ಲದ ಕಾರಣ, ಬೆಳೆದ ಮೀನುಗಳನ್ನು ಮಾರಾಟ ಮಾಡಲಾಗದೆ ಅವರು ತಕ್ಷಣದ ಭಾರಿ ಆರ್ಥಿಕ ನಷ್ಟ ಅನುಭವಿಸಿದರು. ಇದೀಗ ಹೊಂಡದಲ್ಲಿರುವ ಆ 8 ಕೋಟಿ ಮೀನುಗಳನ್ನು ಬದುಕಿಸಿಕೊಳ್ಳಲು ರೈತರು ಪ್ರತಿದಿನ ತಮ್ಮ ಜೇಬಿನಿಂದಲೇ ಹಣ ಸುರಿದು ಆಹಾರ ನೀಡುತ್ತಿದ್ದಾರೆ. ಮುಂದೆ ಈ ಮೀನುಗಳ ಗತಿಯೇನು, ತಾವು ಹಾಕಿದ ಬಂಡವಾಳ ಹಿಂದಿರುಗುತ್ತದೆಯೇ ಎಂಬ ಭವಿಷ್ಯದ ಅರಿವಿಲ್ಲದೆ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿ ಪರದಾಡುತ್ತಿರೆ. ನಿತ್ಯದ ಆದಾಯವನ್ನೇ ನೆಚ್ಚಿಕೊಂಡಿದ್ದ ನೂರಾರು ಕುಟುಂಬಗಳು ಕಣ್ಣೆದುರೇ ತಮ್ಮ ದೈನಂದಿನ ಜೀವನೋಪಾಯವನ್ನು ಕಳೆದುಕೊಂಡು ದಿಕ್ಕುತೋಚದಂತಾಗಿವೆ.

ಈ ವೈಫಲ್ಯದ ದೀರ್ಘಕಾಲೀನ ಪರಿಣಾಮಗಳು ಗ್ರಾಮೀಣ ಆರ್ಥಿಕತೆಯ ಪಾಲಿಗೆ ಇನ್ನಷ್ಟು ಮಾರಕವಾಗಿವೆ. ಭವಿಷ್ಯದ ಬದುಕು ಕಟ್ಟಿಕೊಳ್ಳುವ ಕನಸು ಕಂಡು ಸಾಲ ಮಾಡಿ ಹೊಂಡಗಳನ್ನು ನಿರ್ಮಿಸಿದ್ದ ಜನಸಾಮಾನ್ಯರು, ಇದೀಗ ಸಾಲದ ಸುಳಿಗೆ ಸಿಲುಕಿ ಕಣ್ಣೀರು ಹಾಕುತ್ತಿದ್ದಾರೆ.

ಒಮ್ಮೆ ತೀವ್ರ ನಷ್ಟ ಅನುಭವಿಸಿದ ರೈತರು ಮತ್ತೆ ಮೀನುಗಾರಿಕೆಯತ್ತ ಮುಖಮಾಡುವ ಸಾಹಸಕ್ಕೆ ಕೈಹಾಕುತ್ತಿಲ್ಲ. ಇದರಿಂದಾಗಿ ಅಪಾರ ಶ್ರಮ ಹಾಗೂ ವೆಚ್ಚದಲ್ಲಿ ನಿರ್ಮಾಣವಾಗಿದ್ದ ಹೊಂಡಗಳು ಇಂದು ಪಾಳುಬಿದ್ದಿವೆ. ಸ್ವಾವಲಂಬಿಗಳಾಗಬೇಕಿದ್ದ ಪರಿಶಿಷ್ಟ ಪಂಗಡದ ಜನರು ಹಾಗೂ ರೈತರು ಮತ್ತೆ ದಿನಗೂಲಿ ಅರಸಿ ಹೋಗುವಂತಹ ದಯನೀಯ ಸ್ಥಿತಿ ನಿರ್ಮಾಣವಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ, ಸರ್ಕಾರಿ ಯೋಜನೆಗಳ ಮೇಲಿನ ಜನರ ನಂಬಿಕೆಯೇ ಸಂಪೂರ್ಣವಾಗಿ ಕುಸಿದು ಹೋಗಿದ್ದು, ಭವಿಷ್ಯದಲ್ಲಿ ಎಷ್ಟೇ ಉತ್ತಮ ಕಾರ್ಯಕ್ರಮಗಳನ್ನು ತಂದರೂ ಅದನ್ನು ರೈತರು ಅನುಮಾನದಿಂದ ನೋಡುವಂತಹ ವಾತಾವರಣ ಸೃಷ್ಟಿಯಾಗಿದೆ.

ಪಕ್ಕದ ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಯನ್ನೊಳಗೊಂಡ ಕರಾವಳಿ ತೀರದ ಉದಾಹರಣೆಯನ್ನು ಗಮನಿಸಿದರೆ ನಮ್ಮ ಆಡಳಿತ ವ್ಯವಸ್ಥೆಯ ವೈಫಲ್ಯ ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲಿನ ಸರಕಾರವು ಮತ್ಸ್ಯಕಾರ ಸೇವಾಲೋ ಹಾಗೂ ಸಮಗ್ರ ಮೀನುಗಾರಿಕಾ ಯೋಜನೆಯ ಮೂಲಕ ಮೀನುಗಾರಿಕೆಯನ್ನೇ ಒಂದು ಬೃಹತ್ ಆರ್ಥಿಕ ಶಕ್ತಿಯನ್ನಾಗಿ ಪರಿವರ್ತಿಸಿದೆ. ಕೇವಲ ಮೀನು ಮರಿಗಳನ್ನು ನೀಡುವುದಕ್ಕಷ್ಟೇ ಸೀಮಿತವಾಗದೆ, ಮೀನು ಕೃಷಿಗೆ ಅಗತ್ಯವಿರುವ ನೀರು ಮತ್ತು ಮಣ್ಣು ಪರೀಕ್ಷೆಗಾಗಿ ಅತ್ಯಾಧುನಿಕ ಸಂಯೋಜಿತ ಜಲಚರ ಪ್ರಯೋಗಾಲಯಗಳು, ಶೈತ್ಯಾಗಾರ ಹೊಂದಿರುವ ವಾಹನಗಳು ಹಾಗೂ ಸಂಸ್ಕರಣಾ ಘಟಕಗಳನ್ನು ಯಶಸ್ವಿಯಾಗಿ ನಿರ್ಮಾಣ ಮಾಡಲಾಗಿದೆ.

ಇಡೀ ಗೋದಾವರಿ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಮೀನುಗಾರಿಕೆಗೆ ಸಬ್ಸಿಡಿ ದರದಲ್ಲಿ ವಿದ್ಯುತ್, ಸುಸಜ್ಜಿತ ಮಾರುಕಟ್ಟೆ ಹಾಗೂ ರಫ್ತಿನವರೆಗೆ ಒಂದು ಸಂಪೂರ್ಣವಾದ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಮೂಲಕ ಆಂಧ್ರಪ್ರದೇಶವು ಇಡೀ ದೇಶದ ಅತಿದೊಡ್ಡ ಜಲಚರ ಕೃಷಿಯ ಕೇಂದ್ರವಾಗಿ ಹೊರಹೊಮ್ಮಿದೆ. ಆದರೆ, ನಮ್ಮ ರಾಜ್ಯ ಸರಕಾರಕ್ಕೆ ಹಾತಿಕಟ್ಟೆಯಂತಹ ಒಂದು ಸಣ್ಣ ಪ್ರದೇಶದಲ್ಲಿ ಜಾರಿಯಲ್ಲಿದ್ದ ಏಕೈಕ ಯೋಜನೆಯನ್ನೂ ಸಮರ್ಥವಾಗಿ ಮುನ್ನಡೆಸಲು ಸಾಧ್ಯವಾಗದಿರುವುದು ಆಡಳಿತ ಯಂತ್ರದ ಇಚ್ಛಾಶಕ್ತಿಯ ಕೊರತೆಯನ್ನು ಎತ್ತಿ ತೋರಿಸುತ್ತದೆ.



ಗ್ರಾಮೀಣ ಆರ್ಥಿಕತೆಯ ಸಬಲೀಕರಣವು ಆಂಧ್ರಪ್ರದೇಶದ ಒಟ್ಟು ರಾಜ್ಯದ ಆರ್ಥಿಕತೆಯ ಮೇಲೂ ಭಾರಿ ಧನಾತ್ಮಕ ಪರಿಣಾಮ ಬೀರಿದೆ. ಇಂದು ಆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಮೀನುಗಾರಿಕೆ ವಲಯದ ಪಾಲು ಶೇಕಡಾ 7.4 ರಷ್ಟಿದೆ. ಅಂದರೆ ಮೀನುಗಾರಿಕೆಯು ಆ ರಾಜ್ಯದ ಬೊಕ್ಕಸವನ್ನು ತುಂಬುವ ಅತಿಮುಖ್ಯ ಆರ್ಥಿಕ ಮೂಲವಾಗಿ ಮಾರ್ಪಟ್ಟಿದೆ.

ಗೋದಾವರಿಯಲ್ಲಿ ಇಡೀ ಜಿಲ್ಲೆಯ ಹಾಗೂ ರಾಜ್ಯದ ಆರ್ಥಿಕತೆಯನ್ನೇ ಬದಲಾಯಿಸುವ ಕೆಲಸವಾಗುತ್ತಿದ್ದರೆ, ನಮ್ಮಲ್ಲಿ ಇರುವ ಸಣ್ಣ ವ್ಯವಸ್ಥೆಯನ್ನೂ ಕಾಪಾಡಿಕೊಳ್ಳಲಾಗದ ದುಸ್ಥಿತಿ ನಿರ್ಮಾಣವಾಗಿದೆ. ಕೇವಲ ನೆಪಗಳನ್ನು ಹೇಳುವುದನ್ನು ಬಿಟ್ಟು, ಪಕ್ಕದ ರಾಜ್ಯದ ಇಂತಹ ಅಭಿವೃದ್ಧಿ ಮಾದರಿಗಳಿಂದ ಪಾಠ ಕಲಿತು ನಮ್ಮ ರಾಜ್ಯದಲ್ಲಿಯೂ ಮೀನುಗಾರಿಕೆ ಕ್ಷೇತ್ರವನ್ನು ವಿಸ್ತರಿಸುವ ಬದ್ಧತೆಯನ್ನು ಸರಕಾರ ತೋರಬೇಕಿದೆ.

**ಬೇಕಿದೆ ಸಮಗ್ರ ಮಹಾಯೋಜನೆ**

ಕರ್ನಾಟಕವು 3.20 ಕಿಲೋಮೀಟರ್ ಉದ್ದದ ಕರಾವಳಿ ತೀರ ಹಾಗೂ ಅಣೆಕಟ್ಟುಗಳು, ಕೆರೆಗಳು ಸೇರಿದಂತೆ 5 ಲಕ್ಷ ಹೆಕ್ಟೇರ್‌ಗೂ ಅಧಿಕ ವಿಸ್ತೀರ್ಣದ ಒಳನಾಡು ಜಲಸಂಪನ್ಮೂಲವನ್ನು ಹೊಂದಿರುವ ಶ್ರೀಮಂತ ರಾಜ್ಯವಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಮೀನುಗಾರಿಕಾ ವಲಯದ ಪಾಲು ಕೇವಲ ಶೇಕಡಾ 1ರಷ್ಟಿದೆ. ಆಂಧ್ರಪ್ರದೇಶದಲ್ಲಿ ಮೀನುಗಾರಿಕಾ ವಲಯವು ಆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸುಮಾರು ಶೇಕಡಾ 7ರಷ್ಟು ಬೃಹತ್ ಕೊಡುಗೆ ನೀಡುತ್ತಿದೆ.

ಇಂತಹ ಅಪಾರ ಸಾಮರ್ಥ್ಯವಿದ್ದರೂ, ಸರಕಾರದ ಇಚ್ಛಾಶಕ್ತಿಯ ಕೊರತೆಯಿಂದಾಗಿ ನಾವು ವಿಫಲರಾಗುತ್ತಿದ್ದೇವೆ ಎನ್ನುವುದಕ್ಕೆ ಶಿವಮೊಗ್ಗ ಜಿಲ್ಲೆಯ ಹಾತಿಕಟ್ಟೆ ಮೀನುಗಾರಿಕೆ ಯೋಜನೆಯ ದುಸ್ಥಿತಿಯೇ ಪ್ರಮುಖ ಸಾಕ್ಷಿಯಾಗಿದೆ. ನಮ್ಮ ರಾಜ್ಯದಲ್ಲಿರುವ ಬೃಹತ್ ಅಣೆಕಟ್ಟುಗಳು ಮತ್ತು ವಿಶಾಲವಾದ ನೈಸರ್ಗಿಕ ವ್ಯವಸ್ಥೆಗಳನ್ನು ಬಳಸಿಕೊಂಡು ಇಂತಹ ಹತ್ತಾರು ಜನಪರ ಯೋಜನೆಗಳನ್ನು ರೂಪಿಸಬಹುದಾಗಿದ್ದರೂ, ಆಡಳಿತ ಯಂತ್ರವು ಮೀನುಗಾರಿಕೆಯನ್ನು ಬೆಳೆಸುವಲ್ಲಿ ಸಂಪೂರ್ಣವಾಗಿ ಎಡವಿದೆ.

ಗೋದಾವರಿಯಲ್ಲಿ ಇಡೀ ರಾಜ್ಯದ ಆರ್ಥಿಕತೆಯನ್ನೇ ಬದಲಾಯಿಸುವ ಕೆಲಸವಾಗುತ್ತಿದ್ದರೆ, ನಮ್ಮ ರಾಜ್ಯ ಸರಕಾರಕ್ಕೆ ಹಾತಿಕಟ್ಟೆಯಂತಹ ಒಂದು ಸಣ್ಣ ಪ್ರದೇಶದಲ್ಲಿ ಜಾರಿಯಲ್ಲಿದ್ದ ಏಕೈಕ ಯೋಜನೆಯನ್ನೂ ಸಮರ್ಥವಾಗಿ ಮುನ್ನಡೆಸಲು ಸಾಧ್ಯವಾಗಿಲ್ಲ.

ರಾಜ್ಯದಲ್ಲಿ ಮೀನುಗಾರಿಕೆ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಮತ್ತು ರೈತರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಒಂದು ಸುದೀರ್ಘವಾದ ಮಹಾಯೋಜನೆಯನ್ನು ತುರ್ತಾಗಿ ರೂಪಿಸಬೇಕಾಗಿದೆ. ಮೊದಲನೆಯದಾಗಿ, ಮೀನು ಮರಿಗಳ ಉತ್ಪಾದನೆ ಮತ್ತು ವಿತರಣೆಯನ್ನು ತಾಲೂಕು ಮಟ್ಟದಲ್ಲಿ ವಿಕೇಂದ್ರೀಕರಣಗೊಳಿಸಬೇಕು ಹಾಗೂ ಪ್ರತಿಯೊಬ್ಬ ಆಸಕ್ತ ರೈತನಿಗೂ ಕಡ್ಡಾಯವಾಗಿ ತಾಂತ್ರಿಕ ತರಬೇತಿ ನೀಡಬೇಕು. ಎರಡನೆಯದಾಗಿ, ರೈತರು ಬೆಳೆದ ಮೀನುಗಳನ್ನು ದೀರ್ಘಕಾಲ ಸಂರಕ್ಷಿಸಲು ಶೈತ್ಯಾಗಾರಗಳನ್ನು ನಿರ್ಮಿಸಬೇಕು ಮತ್ತು ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿ ತಪ್ಪಿಸಲು ಸರ್ಕಾರಿ ಸ್ವಾಮ್ಯದ ನೇರ ಖರೀದಿ ಕೇಂದ್ರಗಳನ್ನು ಸ್ಥಾಪಿಸಬೇಕು.

ಮೂರನೆಯದಾಗಿ, ಮೀನುಗಾರಿಕೆಯನ್ನು ಕೇವಲ ಆಹಾರ ಉತ್ಪಾದನೆಯಾಗಿ ನೋಡದೆ, ಅದನ್ನೊಂದು ಮೌಲ್ಯವರ್ಧಿತ ಹಾಗೂ ರಫ್ತು ಆಧಾರಿತ ಉದ್ಯಮವಾಗಿ ಮೇಲ್ದರ್ಜೆಗೇರಿಸಬೇಕು. ಸರಕಾರ ನೆಪ ಹೇಳುವುದನ್ನು ಬಿಟ್ಟು, ಇಂತಹ ಸಮಗ್ರ ಮಹಾಯೋಜನೆಗಳನ್ನು ಬದ್ಧತೆಯಿಂದ ಜಾರಿಗೊಳಿಸಿದಾಗ ಮಾತ್ರ ಗ್ರಾಮೀಣ ಆರ್ಥಿಕತೆ ಉಸಿರಾಡಲು ಹಾಗೂ ರೈತರು ಸ್ವಾವಲಂಬಿಗಳಾಗಲು ಸಾಧ್ಯ.

– **ಗುರುರಾಜ್** ಗಂಟಿಹೊಳೆ



## ಅಪರೂಪದ ಮರವಂತೆ ಬೀಚ್

ಪ್ರಕೃತಿಯ ಮಡಿಲಿನಲ್ಲಿ ನೆಲೆಸಿರುವ ಪ್ರವಾಸಿ ತಾಣಗಳು ಮನಸ್ಸಿಗೆ ಹೊಸ ಚೈತನ್ಯವನ್ನು ನೀಡುತ್ತವೆ. ಕರ್ನಾಟಕದ ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನಲ್ಲಿರುವ ಮರವಂತೆ ಬೀಚ್ ಅಂತಹ ಅದ್ಭುತ ಪ್ರವಾಸಿ ತಾಣಗಳಲ್ಲಿ ಪ್ರಮುಖವಾದುದು. ಒಂದೆಡೆ ವಿಶಾಲವಾದ ಅರಬ್ಬೀ ಸಮುದ್ರ, ಮತ್ತೊಂದೆಡೆ ಶಾಂತವಾಗಿ ಹರಿಯುವ ಸೌಪರ್ಣಿಕಾ ನದಿ ಮತ್ತು ಮಧ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಸಾಗುವ ಅಪರೂಪದ ದೃಶ್ಯವನ್ನು ಇಲ್ಲಿ ಕಾಣಬಹುದು. ಈ ವಿಶಿಷ್ಟ ಸೌಂದರ್ಯವೇ ಮರವಂತೆಯನ್ನು ದೇಶ-ವಿದೇಶದ ಪ್ರವಾಸಿಗರ ನೆಚ್ಚಿನ ತಾಣವನ್ನಾಗಿಸಿದೆ.

ಮರವಂತೆ ಬೀಚ್ ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನಲ್ಲಿದೆ. ಉಡುಪಿಯಿಂದ ಸುಮಾರು 60 ಕಿ.ಮೀ. ಹಾಗೂ ಕುಂದಾಪುರದಿಂದ ಸುಮಾರು 20 ಕಿ.ಮೀ. ದೂರದಲ್ಲಿದೆ. ರಾಷ್ಟ್ರೀಯ ಹೆದ್ದಾರಿ-66ರ ಪಕ್ಕದಲ್ಲಿರುವುದರಿಂದ ರಸ್ತೆ ಮಾರ್ಗದಲ್ಲಿ ಸುಲಭವಾಗಿ ತಲುಪಬಹುದು.

**ಪ್ರಕೃತಿ ಸೌಂದರ್ಯ :** ಮರವಂತೆ ಬೀಚ್ ತನ್ನ ಸ್ವಚ್ಛವಾದ ಬಂಗಾರದ ಬಣ್ಣದ ಮರಳು, ನೀಲಿಬಣ್ಣದ ಸಮುದ್ರ, ಹಸಿರಿನಿಂದ ಕಂಗೊಳಿಸುವ ತೆಂಗಿನ ಮರಗಳು ಹಾಗೂ ತಂಪಾದ ಗಾಳಿಯಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಸಮುದ್ರದ ಅಲೆಗಳು ತೀರಕ್ಕೆ ಅಪ್ಪಳಿಸುವ ದೃಶ್ಯ ಮತ್ತು ಅವುಗಳ ನಾದ ಮನಸ್ಸಿಗೆ ನೆಮ್ಮದಿ ನೀಡುತ್ತದೆ. ಬೆಳಗಿನ ಸೂರ್ಯೋದಯ ಹಾಗೂ ಸಂಜೆ ಸೂರ್ಯಾಸ್ತದ ವೇಳೆ ಸಮುದ್ರ ತೀರದ ಸೌಂದರ್ಯ ಇನ್ನಷ್ಟು ಮನಮೋಹಕವಾಗಿರುತ್ತದೆ.

**ವಿಶೇಷತೆ :** ಮರವಂತೆ ಬೀಚ್‌ನ ಅತಿ ದೊಡ್ಡ ವಿಶೇಷತೆ ಎಂದರೆ ಒಂದೇ ರಸ್ತೆಯ ಒಂದು ಬದಿಯಲ್ಲಿ ಅರಬ್ಬೀ ಸಮುದ್ರ ಹಾಗೂ ಇನ್ನೊಂದು ಬದಿಯಲ್ಲಿ ಸೌಪರ್ಣಿಕಾ ನದಿ ಹರಿಯುವುದು. ಇಂತಹ ಅಪರೂಪದ ಭೌಗೋಳಿಕ ವಿನ್ಯಾಸ ಭಾರತದಲ್ಲೇ ವಿರಳವಾಗಿದೆ. ಆದ್ದರಿಂದ ಈ ಸ್ಥಳ ಛಾಯಾಗ್ರಾಹಕರು ಹಾಗೂ ಪ್ರಕೃತಿ ಪ್ರಿಯರನ್ನು ಹೆಚ್ಚು ಆಕರ್ಷಿಸುತ್ತದೆ ಅಲ್ಲದೆ ಸುಂದರ ಕಡಲ ತಡಿಯಲ್ಲಿರುವ ಮರವಂತೆಯಲ್ಲಿ ಶ್ರೀ ಮಹಾರಾಜ ವರಾಹ ಸ್ವಾಮಿ ದೇವಸ್ಥಾನವಿದೆ. ಇದು ಪರಶುರಾಮ ಸೃಷ್ಟಿಯ ಪವಿತ್ರ ಕ್ಷೇತ್ರಗಳಲ್ಲಿ ಒಂದೆಂದು ಪ್ರಸಿದ್ಧಿ ಪಡೆದಿದೆ. ಈ ದೇವಸ್ಥಾನ ಈ ಒಂದು ಕಡಲ ತೀರಕ್ಕೆ ಒಂದು ಕಿರೀಟ ಪ್ರಾಯದ ಧಾರ್ಮಿಕ ನೆಲೆಯಾಗಿದೆ.

**ಸಂದರ್ಶಿಸಬಹುದಾದ ಹತ್ತಿರದ ಸ್ಥಳಗಳು :**

- ಮೂಕಾಂಬಿಕಾ ದೇವಾಲಯ, ಕೊಲ್ಲೂರು
- ಒತ್ತಿನೆಣೆ
- ಬೈಂದೂರು
- ಸೋಮೇಶ್ವರ ಬೀಚ್
- ಸೌಪರ್ಣಿಕಾ ನದಿಯ ತೀರ

**ಸಂದರ್ಶಿಸಲು ಸೂಕ್ತ ಸಮಯ :** ಅಕ್ಟೋಬರ್‌ನಿಂದ ಫೆಬ್ರವರಿವರೆಗೆ ಇಲ್ಲಿನ ಹವಾಮಾನ ತಂಪಾಗಿದ್ದು, ಪ್ರವಾಸಕ್ಕೆ ಅತ್ಯಂತ ಸೂಕ್ತವಾಗಿದೆ. ಮಳೆಗಾಲದಲ್ಲಿ ಪ್ರಕೃತಿ ಇನ್ನಷ್ಟು ಹಸಿರಿನಿಂದ ಕಂಗೊಳಿಸಿದರೂ, ಭಾರಿ ಮಳೆಯ ಸಮಯದಲ್ಲಿ ಎಚ್ಚರಿಕೆ ಅಗತ್ಯ.

ಮರವಂತೆ ಬೀಚ್ ಕರ್ನಾಟಕದ ಅತ್ಯಂತ ಸುಂದರ ಮತ್ತು ವಿಶಿಷ್ಟ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಪ್ರಕೃತಿಯ ಅದ್ಭುತ ಸೌಂದರ್ಯ, ಅರಬ್ಬೀ ಸಮುದ್ರದ ಅಲೆಗಳು, ಸೌಪರ್ಣಿಕಾ ನದಿಯ ಶಾಂತ ಹರಿವು ಮತ್ತು ಹಸಿರು ಪರಿಸರ ಇವೆಲ್ಲವೂ ಸೇರಿ ಈ ಸ್ಥಳವನ್ನು ಸ್ವರ್ಗದಂತಾಗಿಸಿವೆ. ಇಲ್ಲಿಗೆ ಭೇಟಿ ನೀಡಿದ ಪ್ರತಿಯೊಬ್ಬರ ಮನಸ್ಸಿನಲ್ಲಿ ಮಧುರ ನೆನಪುಗಳು ಉಳಿಯುತ್ತವೆ. ಆದ್ದರಿಂದ ಪ್ರಕೃತಿಯನ್ನು ಪ್ರೀತಿಸುವ ಪ್ರತಿಯೊಬ್ಬರೂ ಜೀವನದಲ್ಲಿ ಒಮ್ಮೆಯಾದರೂ ಮರವಂತೆ ಬೀಚ್‌ಗೆ ಭೇಟಿ ನೀಡಿ ಅದರ ಸೊಬಗನ್ನು ಅನುಭವಿಸಬೇಕು.

– **ರಮೇಶ ನಾಯ್ಕ, ಉಪ್ಪುಂದ,** ಬೈಂದೂರು

> ಒಂದು ಬಾರಿ ಆಡಿದ ಮಾತನ್ನು ಮರಳಿ ಪಡೆಯಲು ಆಗುವುದಿಲ್ಲ. ಆದರೆ ನಾವು ಕೋಪದಲ್ಲಿ ಒಂದು ಕ್ಷಣ ಮಾತನಾಡಿದ ಮಾತು, ಆ ವ್ಯಕ್ತಿಯ ಮನಸ್ಸಿನಲ್ಲಿ ವರ್ಷಗಳವರೆಗೆ ಉಳಿದುಕೊಳ್ಳಬಹುದು. ಕಟುವಾಗಿ ಮಾತನಾಡುವುದು ಕೂಡ ಒಂದು ರೀತಿಯ ಹಿಂಸೆಯೇ. ಏಕೆಂದರೆ ಹಿಂಸೆ ಎಂದರೆ ಕೇವಲ ದೇಹಕ್ಕೆ ನೋವು ಕೊಡುವುದಲ್ಲ; ಮತ್ತೊಬ್ಬರ ಮನಸ್ಸಿಗೆ ನೋವುಂಟು ಮಾಡುವುದೂ ಹಿಂಸೆಯೇ.

## ನಾಲಗೆಯಿಂದ ಆದ ಗಾಯಕ್ಕೆ ಔಷಧವಿಲ್ಲ

ಸಿಹಿಮಾತು ಹೃದಯ ಗೆಲ್ಲುತ್ತದೆ; ಕಟುಮಾತು ಹೃದಯ ಕಳೆದುಕೊಳ್ಳುತ್ತದೆ. ಮನುಷ್ಯನಿಗೆ ದೇವರು ಕೊಟ್ಟಿರುವ ಅತ್ಯಂತ ಅದ್ಭುತವಾದ ಶಕ್ತಿಗಳಲ್ಲಿ ಮಾತು ಕೂಡ ಒಂದು. ಕೈ ಯಿಂದ ಮಾಡಿದ ಗಾಯಕ್ಕೆ ಔಷಧ ಹಚ್ಚಬಹುದು. ಕಾಲಕ್ರಮೇಣ ಚಿಕಿತ್ಸೆಯಿಂದ ಗುಣವಾಗಬಹುದು. ಆದರೆ ಮಾತಿನಿಂದ ಮನಸ್ಸಿಗೆ ಮಾಡಿದ ಗಾಯಕ್ಕೆ ಯಾವ ಔಷಧ ಹಚ್ಚಬೇಕು? ಕಣ್ಣಿಗೆ ಕಾಣದ ಆ ಗಾಯವನ್ನು ಯಾವ ವೈದ್ಯ ಗುಣಪಡಿಸಬೇಕು? ಅದಕ್ಕಾಗಿಯೇ ಹಿರಿಯರು, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಎಂದು ಹೇಳಿದ್ದಾರೆ.



ಒಂದು ಬಾರಿ ಆಡಿದ ಮಾತನ್ನು ಮರಳಿ ಪಡೆಯಲು ಆಗುವುದಿಲ್ಲ. ಆದರೆ ನಾವು ಕೋಪದಲ್ಲಿ ಒಂದು ಕ್ಷಣ ಮಾತನಾಡಿದ ಮಾತು, ಆ ವ್ಯಕ್ತಿಯ ಮನಸ್ಸಿನಲ್ಲಿ ವರ್ಷಗಳವರೆಗೆ ಉಳಿದುಕೊಳ್ಳಬಹುದು. ಕಟುವಾಗಿ ಮಾತನಾಡುವುದು ಕೂಡ ಒಂದು ರೀತಿಯ ಹಿಂಸೆಯೇ. ಏಕೆಂದರೆ ಹಿಂಸೆ ಎಂದರೆ ಕೇವಲ ದೇಹಕ್ಕೆ ನೋವು ಕೊಡುವುದಲ್ಲ; ಮತ್ತೊಬ್ಬರ ಮನಸ್ಸಿಗೆ ನೋವುಂಟು ಮಾಡುವುದೂ ಹಿಂಸೆಯೇ. ಕೈಯಿಂದ ಹೊಡೆದರೆ ದೇಹಕ್ಕೆ ಗಾಯವಾಗಬಹುದು. ಆದರೆ ಕಟು ಮಾತಿನಿಂದ ಹೊಡೆದರೆ ಮನಸ್ಸಿಗೆ, ಆತ್ಮವಿಶ್ವಾಸಕ್ಕೆ, ಸ್ವಾಭಿಮಾನಕ್ಕೆ, ಸಂಬಂಧಕ್ಕೆ ಗಾಯವಾಗಬಹುದು.

ನಮ್ಮ ನಾಲಿಗೆಯ ಶಕ್ತಿ ಅಪಾರ. ಒಂದು ಮಾತು ಸಂಬಂಧವನ್ನು ಗಟ್ಟಿ ಮಾಡಬಹುದು. ಇನ್ನೊಂದು ಮಾತು ವರ್ಷಗಳ ಸಂಬಂಧವನ್ನೇ ಮುರಿಯಬಹುದು. ನೀನು ಒಳ್ಳೆಯ ಕೆಲಸ ಮಾಡಿದ್ದೀಯ ಎಂಬ ನಾಲ್ಕು ಪದಗಳು ಒಬ್ಬ ನಿರಾಶನಾದ ವ್ಯಕ್ತಿಗೆ ಮತ್ತೆ ಪ್ರಯತ್ನಿಸುವ ಧೈರ್ಯ ನೀಡಬಹುದು. ನಿನ್ನಿಂದ ಏನೂ ಆಗುವುದಿಲ್ಲ ಎಂಬ ನಾಲ್ಕು ಪದಗಳು ಅದೇ ವ್ಯಕ್ತಿಯ ಆತ್ಮವಿಶ್ವಾಸವನ್ನು ಕುಗ್ಗಿಸಬಹುದು.

ನಾವು ಮಾತನಾಡುವ ಮೊದಲು ಒಂದು ಕ್ಷಣ ಯೋಚಿಸಿದರೆ ಅನೇಕ ಸಂಬಂಧಗಳು ಉಳಿಯಬಹುದು. ಆದರೆ ಕೋಪ ಬಂದಾಗ ಯೋಚಿಸುವ ಶಕ್ತಿ ಕಡಿಮೆಯಾಗುತ್ತದೆ. ಮನಸ್ಸಿನಲ್ಲಿ ಬಂದದ್ದನ್ನೆಲ್ಲ ನಾಲಿಗೆಗೆ ಒಪ್ಪಿಸುತ್ತೇವೆ. ನಂತರ ಕೋಪ ಕಡಿಮೆಯಾದಾಗ, ನಾನು ಹಾಗೆ ಹೇಳಬಾರದಿತ್ತು ಎಂದು ಪಶ್ಚಾತ್ತಾಪ ಪಡುತ್ತೇವೆ. ಆದರೆ ಹಾಗೆ ನಾಲಿಗೆಯಿಂದ ಹೊರಟ ಮಾತು ತನ್ನ ಕೆಟ್ಟ ಕೆಲಸ ಮಾಡಿ ಆಗಿರುತ್ತದೆ. ಒಂದು ಕಟುಮಾತು ಸಂಬಂಧವನ್ನು ಮುರಿಯಬಹುದು. ಒಂದು ಸಿಹಿಮಾತು ಸಂಬಂಧವನ್ನು ಉಳಿಸಬಹುದು. ಒಂದು ಅವಮಾನ ಧೈರ್ಯವನ್ನು ಕುಗ್ಗಿಸಬಹುದು. ಒಂದು ಪ್ರೋತ್ಸಾಹ ಜೀವನಕ್ಕೆ ಹೊಸ ದಿಕ್ಕು ನೀಡಬಹುದು.

ಮಾತನಾಡುವ ಮೊದಲು ನಮ್ಮ ನಾಲಿಗೆಯಿಂದ ಹೊರಡುವ ಮಾತು ಮತ್ತೊಬ್ಬರ ಹೃದಯಕ್ಕೆ ನೋವಾಗುತ್ತದೆಯೇ, ಅಥವಾ ನೆಮ್ಮದಿಯಾಗುತ್ತದೆಯೇ ಎಂಬ ಅರಿವು ಮೂಡಿಸಿಕೊಂಡರೆ ಸ್ನೇಹ ಸಂಬಂಧಗಳು ಸದಾ ಹಸಿರಾಗಿರುತ್ತವೆ.

ಆದ್ದರಿಂದ ನಾವು ದೊಡ್ಡ ಸಹಾಯ ಮಾಡಲು ಸಾಧ್ಯವಾಗದಿದ್ದರೂ ಪರವಾಗಿಲ್ಲ. ಒಳ್ಳೆಯ ಮಾತು ಆಡೋಣ. ಪ್ರೀತಿಯಿಂದ ಮಾತನಾಡೋಣ. ಕರುಣೆಯಿಂದ ಮಾತನಾಡೋಣ. ಮತ್ತೊಬ್ಬರ ಸಂತೋಷ ವನ್ನು ಕಸಿದುಕೊಳ್ಳದ ನಾಲಿಗೆಯನ್ನು ಬೆಳೆಸೋಣ. ಏಕೆಂದರೆ ದೇಹದ ಗಾಯಕ್ಕೆ ಔಷಧವಿದೆ. ಮನಸ್ಸಿನ ಗಾಯಕ್ಕೆ ಕಾಲ ಬೇಕು. ಆದರೆ ಪ್ರೀತಿಯ ಮಾತು ಆ ಗಾಯಕ್ಕೆ ಮದ್ದಾಗಬಹುದು.

ನಮ್ಮ ನಾಲಿಗೆ ಯಾರದೋ ಕಣ್ಣೀರಿನ ಕಾರಣವಾಗದಿರಲಿ. ಯಾರದಾದರೂ ಮುಖದಲ್ಲಿ ನಗು ಮೂಡಿಸುವ ಕಾರಣವಾಗಲಿ. ಅದೇ ನಿಜವಾದ ಮಾನವೀಯತೆ. ಅದೇ ಮಾತಿನ ಸಂಸ್ಕಾರ. ಅದೇ ಬದುಕಿನ ಸೌಂದರ್ಯ.

– **ವಿಜಯಕುಮಾರ್** ಕಟ್ಟೆ

## ಪೆರುವಿನಲ್ಲಿ ಬೃಹತ್ ನಜ್ಕಾ ರೇಖಾಚಿತ್ರಗಳನ್ನು ರಚಿಸಿದ್ದು ಹೇಗೆ?

ದಕ್ಷಿಣ ಅಮೇರಿಕಾದ ಪೆರು ದೇಶದ ದಕ್ಷಿಣ ತೀರದ ಮರುಭೂಮಿಯ ಮೇಲೆ ವಿಮಾನದಲ್ಲಿ ಸಾಗುವಾಗ, ಹತ್ತಾರು ಬೃಹತ್ ರೇಖಾಚಿತ್ರಗಳು ಕಾಣಿಸುತ್ತವೆ. (ಫೋಟೋ 1 – ಕೋತಿಯ ರೇಖಾಚಿತ್ರ ನೋಡಿ.) ನೆಲದಲ್ಲಿ ನೂರಾರು ಅಡಿಗಳ ವ್ಯಾಪ್ತಿಯ ಈ ರೇಖಾಚಿತ್ರಗಳನ್ನು ರಚಿಸಿದ್ದು ಹೇಗೆ? ಎಂಬ ಪ್ರಶ್ನೆಯಿಂದಾಗಿ ಅವುಗಳ ಬಗ್ಗೆ ನಿಗೂಢತೆ ಕವಿದಿತ್ತು.

ಅಲ್ಲಿನ ಮೂಲನಿವಾಸಿಗಳಾದ ನಜ್ಕಾ ಜನರು ಇವನ್ನು ರಚಿಸಿದ್ದು ಸುಮಾರು 2,000 ವರುಷಗಳ ಮುಂಚೆ. ಝೇಂಕಾರ ಹಕ್ಕಿ, ಭಾರೀ ಗಾತ್ರದ ವೇಲ್, ಗಗನಯಾನಿ ಇತ್ಯಾದಿ ಚಿತ್ರಗಳು ಅಲ್ಲಿವೆ. ಅವರು ಇವನ್ನು ದೇವರಿಗೆ ಸಮರ್ಪಿಸಿರಬಹುದು ಎಂಬುದೊಂದು ಊಹೆ. ಆದರೆ, ಅವರು ಯಾವ ಕಾರಣಕ್ಕಾಗಿ ಇವನ್ನು ರಚಿಸಿದರು ಎಂಬುದು ಚರಿತ್ರಕಾರರಿಗೆ ಬಿಡಿಸಲಾಗದ ಒಗಟಾಗಿ ಉಳಿದಿದೆ.

ಅದೇನಿದ್ದರೂ ಈ ರೇಖಾಚಿತ್ರಗಳನ್ನು ಹೇಗೆ ಬಿಡಿಸಿದರು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಇದರಿಂದಾಗಿ, ಇವನ್ನು ಅನ್ಯ ಗ್ರಹಗಳ ಜೀವಿಗಳು ಚಿತ್ರಿಸಿದರು ಎಂಬಂತಹ ಊಹಾಪೂಹಗಳಿಗೆ ತೆರೆ ಬಿದ್ದಿದೆ. ಮೊದಲ ಹಂತದಲ್ಲಿ ಚಿತ್ರಕಾರರು ಈ ವಿನ್ಯಾಸಗಳನ್ನು ಕ್ಯಾನ್‌ವಾಸಿನಲ್ಲಿ ಪುಟ್ಟದಾಗಿ ಚಿತ್ರಿಸಿದರು. ಅನಂತರ, ಅವನ್ನೇ ಹೆಚ್ಚಿನ ಅನುಪಾತದಲ್ಲಿ ನೆಲದಲ್ಲಿ ಗುರುತಿಸಿದರು – ಈಗ ವಿನ್ಯಾಸಗಾರರು ನೀಲನಕ್ಷೆಗಳ ಆಧಾರದಿಂದ ಬೃಹತ್ ಕಟ್ಟಡಗಳನ್ನು ನಿರ್ಮಿಸುವಂತೆ. ನೆಲದಲ್ಲಿ ಉದ್ದುದ್ದ ಸರಳರೇಖೆಗಳನ್ನು ಗುರುತಿಸಲು ಅವರು ಕೋಲುಗಳು ಮತ್ತು ಹಗ್ಗಗಳನ್ನು ಬಳಸಿದರು.

ಎರಡನೆಯ ಹಂತದಲ್ಲಿ, ನೆಲದಲ್ಲಿ ಮೂಡಿಸಿದ ಗುರುತುಗಳ ಆಧಾರದಿಂದ ಅವರು ರೇಖಾಚಿತ್ರಗಳನ್ನು ನಿರ್ಮಿಸಿದರು. ಎರಡು ಗೂಟಗಳ ನಡುವೆ ಹಗ್ಗ ಕಟ್ಟಿ, ಅದಕ್ಕೆ ಸರಿಯಾಗಿ ನೆಲದಲ್ಲಿದ್ದ ಕಪ್ಪುಕಲ್ಲುಗಳನ್ನು ತೆಗೆದು, ಅದರ ಕೆಳಗಿದ್ದ ತೆಳುಬಣ್ಣದ ಮಣ್ಣು ಕಾಣುವಂತೆ ಮಾಡಿದರು. ಅವರು ಸುರುಳಿ ಆಕೃತಿ ರಚಿಸಿದ ವಿಧಾನ: ಕೇಂದ್ರದಲ್ಲಿ ಗೂಟ ಬಡಿದು, ಅದಕ್ಕೆ ಹಗ್ಗ ಕಟ್ಟಿ, ಗೂಟದ ಸುತ್ತಲೂ ನಡೆಯುವುದು.

ಅವರು ಇಷ್ಟೇ ಮಾಡಿದ್ದರೆ, ಆ ರೇಖಾಚಿತ್ರಗಳು ಸಾವಿರಾರು ವರುಷ ಉಳಿಯುತ್ತಿರಲಿಲ್ಲ. ಗಾಳಿ ಮತ್ತು ಮಳೆಯ ಹೊಡೆತದಿಂದಾಗಿ ಅವು ಅಳಿದು ಹೋಗಿ, ಮರುಭೂಮಿ ಪುನಃ ಕೆಂಗಂದು ಬಣ್ಣಕ್ಕೆ ತಿರುಗುತ್ತದೆಂದು ಅವರಿಗೂ ತಿಳಿದಿತ್ತು. ಆದ್ದರಿಂದ, ಅವರು ತಾವು ರಚಿಸಿದ ರೇಖೆಗಳ ಅಂಚಿನಲ್ಲಿ ಮಧ್ಯಮ ಗಾತ್ರದ ಕಲ್ಲುಗಳನ್ನು ಸಾಲಾಗಿ ಜೋಡಿಸಿದರು. ಭಾರವಾದ ಈ ಕಲ್ಲುಗಳು ಗಾಳಿಯ ಹೊಡೆತ ಮತ್ತು ಅಲ್ಲಿನ ಅಲ್ಪ ಮಳೆಯ ಹೊಡೆತವನ್ನು ಶತಮಾನಗಳ ಕಾಲ ತಾಳಿಕೊಂಡು, ನೆಲದಲ್ಲಿ ಮೂಡಿಸಿದ ರೇಖೆಗಳನ್ನು ಇಂದಿಗೂ ಉಳಿಸಿವೆ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ, ಪೆರುವಿನ ಮರುಭೂಮಿಯ ಮೇಲೆ ವಿಮಾನದಲ್ಲಿ ಪ್ರಯಾಣಿಸುವವರ ಗಮನ ಸೆಳೆದವು ಈ ರೇಖಾಚಿತ್ರಗಳು. ಅವನ್ನು ರಚಿಸಿದ ವಿಧಾನವನ್ನು ಪರಿಣತರು ಈ ಮೇಲಿನಂತೆ ವಿವರಿಸಿದಾಗ ಅವುಗಳನ್ನು ಆವರಿಸಿದ್ದ ನಿಗೂಢತೆ ಮರೆಯಾಯಿತು. ಈ ಭೂಮಿಯಲ್ಲಿ ಇಂತಹ ನಿಗೂಢ ವಿದ್ಯಮಾನಗಳು ಇನ್ನು ಎಷ್ಟಿವೆಯೋ!

– **ಅಡ್ಡೂರು** ಕೃಷ್ಣ ರಾವ್



# ಅರಣ್ಯ ಸಿಬ್ಬಂದಿ ಗುಂಡೇಟಿಗೆ ಮೂವರು ಬೇಟೆಗಾರರ ಬಲಿ

## ಮುಗಿಲು ಮುಟ್ಟಿದ ಸಂಬಂಧಿಕರ ಆಕ್ರಂದನ | ಅರಣ್ಯಾಧಿಕಾರಿ ಕಚೇರಿ ಪೀಠೋಪಕರಣ ಧ್ವಂಸ

• ಪ್ರಜೋದಯ ವರದಿ

**ಮೈಸೂರು:** ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮದ ನಡುವೆ ಚಾಮರಾಜನಗರ ಜಿಲ್ಲೆಯಲ್ಲಿ ನಡೆದ ಶೂಟೌಟ್ ಪ್ರಕರಣ ರಾಜ್ಯಾದ್ಯಂತ ಆಘಾತ ಮೂಡಿಸಿದೆ. ಅರಣ್ಯ ಇಲಾಖೆ ನಡೆಸಿದ ಗುಂಡಿನ ದಾಳಿಗೆ ಮೂವರು ಬೇಟೆಗಾರರು ಬಲಿಯಾಗಿದ್ದು, ಮೂವರ ಮೃತದೇಹಗಳು ಮೈಸೂರಿನ ಕೆ. ಆರ್.ಆಸ್ಪತ್ರೆ ಶವಾಗಾರದಲ್ಲಿವೆ.

ಮೃತದೇಹ ನೋಡಲು ಬಂದ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿದೆ. ಮೃತರ ಸಂಬಂಧಿ ವಿಜಯ್ ಅವರು ಮಾಧ್ಯಮಗಳ ಮುಂದೆ ಕಣ್ಣೀರಿಟ್ಟು ''ನನಗೆ ಮೂವರೂ ಮಾವಂದಿರು. ಎಲ್ಲರೂ ರೈತರು. ಕೃಷಿ ಮಾಡುತ್ತಿದ್ದರು. ಹಸು-ಎಮ್ಮೆ ಸಾಕುತ್ತಿದ್ದೆವು. ಅವರು ಯಾವುದೇ ಬೇಟೆ ಆಡುತ್ತಿರಲಿಲ್ಲ. ಹಾಗಾದರೆ ಯಾಕೆ ಅರಣ್ಯ ಇಲಾಖೆ ಶೂಟ್ ಮಾಡಬೇಕು ಎಂದು ಪ್ರಶ್ನಿಸಿದ್ದಾರೆ.

ದನಕರುಗಳು ಕಾಡಿಗೆ ಮೇಯಲು ಹೋಗುತ್ತವೆ. ರಾತ್ರಿ ವೇಳೆ ವಾಪಸ್ ಬರದಿದ್ದರೆ ಕರೆತರಲು ಹೋಗುವುದು ಸಹಜ. ಕಾಡಂಚಿನ ಜನ ಕಾಡು ಪ್ರಾಣಿಗಳ ಭಯದಿಂದ ಸ್ವರಕ್ಷಣೆಗೆ ಬಂದೂಕು ಇಟ್ಟುಕೊಂಡಿರಬಹುದು. ಒಂದು ವೇಳೆ ನಮ್ಮವರ ಬಳಿ ಆಯುಧ ವಿದ್ದರೂ ಗುಂಡು ಹಾರಿಸುವ ಅಗತ್ಯ ವೇನಿತ್ತು? ಬೆಳಿಗ್ಗೆ ಊರಿಂದ ಮಾವಂದಿರನ್ನು ಅರಣ್ಯ ಇಲಾಖೆ ಶೂಟ್ ಮಾಡಿದೆ ಎಂಬ ಸುದ್ದಿ ಬಂತು. ಸ್ವಾತಂತ್ರ್ಯ ದಿನದಂದೇ ನಮಗೆ ಇಂತಹ ಸುದ್ದಿ ಕೊಟ್ಟಿದ್ದಾರೆ'' ಎಂದು ವಿಜಯ್ ಅಳಲು ತೋಡಿಕೊಂಡರು.

''ಶೂಟೌಟ್ ಮಾಡಲು ಅರಣ್ಯ ಇಲಾಖೆಗೆ ಅನುಮತಿ ಕೊಟ್ಟವರು ಯಾರು? ಮೂವರಿಗೂ ಮದುವೆಯಾಗಿದೆ. ಚಿಕ್ಕ ಚಿಕ್ಕ ಮಕ್ಕಳಿದ್ದಾರೆ. ನಮಗೆ ನ್ಯಾಯ ಬೇಕು'' ಎಂದು ಅವರು ಆಗ್ರಹಿಸಿದರು.

ಘಟನೆಯ ಹಿನ್ನೆಲೆ ಮತ್ತು ಗುಂಡು ಹಾರಿಸಲು ಕಾರಣವೇನು ಎಂಬ ಬಗ್ಗೆ ಅರಣ್ಯ ಇಲಾಖೆ ಇನ್ನೂ ಅಧಿಕೃತ ಸ್ಪಷ್ಟನೆ ನೀಡಿಲ್ಲ. ಮೃತದೇಹಗಳ ಮರಣೋತ್ತರ ಪರೀಕ್ಷೆ ಬಳಿಕ ಕುಟುಂಬಕ್ಕೆ ಹಸ್ತಾಂತರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.ಈ ಘಟನೆ ಕಾಡಂಚಿನ ರೈತರ ಭದ್ರತೆ ಮತ್ತು ಅರಣ್ಯ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

**ಅರಣ್ಯಾಧಿಕಾರಿ ಕಚೇರಿ ಪೀಠೋಪಕರಣ ಧ್ವಂಸ**

ಗ್ರಾಮಸ್ಥರು ಹನೂರು ತಾಲೂಕಿನ ಶಾಗ್ಯ ಡಿಆರ್ ಎಫ್ ಓ ಕಚೇರಿಗೆ ನುಗ್ಗಿ ಪೀಠೋಪಕರಣ ಧ್ವಂಸ ಮಾಡಿ ಬೋರ್ಡ್‌ಗಳನ್ನು ಕಿತ್ತು ಹಾಕಿದ್ದಾರೆ. ಹೊರಗಡೆ ಇದ್ದ ಬೈಕುಗಳಿಗೆ ಹಾನಿ ಮಾಡಲಾಗಿದೆ.

ಮೂವರು ಕಾಡು ಬೇಟೆಗಾರರನ್ನು ಕೊಂದು ಹಾಕಿದ ಅರಣ್ಯ ಸಿಬ್ಬಂದಿಗಳ ವಿರುದ್ಧ ಸೇಡಿಗಾಗಿ ಶಾಗ್ಯ ಅರಣ್ಯ ಸಿಬ್ಬಂದಿಗಳ ವಸತಿ ಗೃಹಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಅರಣ್ಯ ಸಿಬ್ಬಂದಿಗಳು ತಪ್ಪಿಸಿಕೊಂಡು ಪರಾರಿಯಾಗಿದ್ದಾರೆಂದು ಮಾಹಿತಿ ಬಂದಿದೆ.

ಅರಣ್ಯ ವಸತಿ ಗೃಹಕ್ಕೆ ನುಗ್ಗಿದ ಕಿಡಿಗೇಡಿಗಳು ಅಲ್ಲಿನ ಟಿವಿ ಮತ್ತು ಬೈಕುಗಳ ಮೇಲೆ ಕಲ್ಲು ಎತ್ತಾಕಿ ಹಾನಿಗೊಳಿಸಿದ್ದಾರೆ ಎಂದು ಅರಣ್ಯ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.



### ಪರಿಹಾರ ಜೊತೆಗೆ ತನಿಖೆಗೆ ಒತ್ತಾಯ

ಈ ಪ್ರಕರಣದ ಉನ್ನತ ಮಟ್ಟದ ತನಿಖೆಯಾಗಬೇಕು. ಮೃತರ ಕುಟುಂಬಗಳಿಗೆ ಪರಿಹಾರ ನೀಡಬೇಕು. ಜೊತೆಗೆ ತಲಾ ಒಬ್ಬರಿಗೆ ಉದ್ಯೋಗ ನೀಡಬೇಕು ಎಂದು ಪ್ರತಿಭಟನಾನಿರತರು ಒತ್ತಾಯಿಸಿದರು. ಪ್ರತಿಭಟನೆಯ ಗಂಭೀರತೆಯನ್ನು ಅರಿತ ಪೊಲೀಸರು ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದು, ಪರಿಸ್ಥಿತಿ ನಿಯಂತ್ರಿಸಲು ಮುಂಜಾಗ್ರತಾ ಕ್ರಮ ಕೈಗೊಂಡು ಗ್ರಾಮಸ್ಥರ ಮನವೊಲಿಸಿ ಪರಿಸ್ಥಿತಿಯನ್ನು ಶಾಂತಗೊಳಿಸಿದ್ದಾರೆ.



# ಉಗ್ರ ಚಟುವಟಿಕೆ: ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿ

## ಸರ್ಕಾರಕ್ಕೆ ಮಾಜಿ ಸಚಿವ ಎ. ಮಂಜು ಒತ್ತಾಯ

• ಪ್ರಜೋದಯ ವರದಿ

**ಅರಕಲಗೂಡು:** ಗುಲ್ಬರ್ಗ ಜಿಲ್ಲೆಯ ಮಹಿಪುರ ಸೇರಿ ಗ್ರಾಮಗಳ ಹೊರವಲಯದಲ್ಲಿ ಪಾಕಿಸ್ತಾನ ಹಾಗು ಐಸಿಸ್ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿರುವ ಆರೋಪದ ಮೇಲೆ ಇಬ್ಬರು ಯುವಕರನ್ನು ಬಂಧಿಸಿರುವ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಸಮಗ್ರ ತನಿಖೆ ನಡೆಸಬೇಕು ಎಂದು ಮಾಜಿ ಸಚಿವ ಎ.ಮಂಜು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂಧಿತರನ್ನು ಮೊಹಮ್ಮದ್ ಸಮೀರ್ (23) ಹಾಗೂ ಸಲ್ಮಾನ್ ಎಂದು ಗುರುತಿಸಲಾಗಿದೆ. ಇಬ್ಬರೂ ಉತ್ತರ ಪ್ರದೇಶದಿಂದ ಬಂದು ಕರ್ನಾಟಕದಲ್ಲಿ ನೆಲೆಸಿರುವವರು ಎಂಬ ಮಾಹಿತಿ ಇದೆ. ಇಂತಹ ಘಟನೆಗಳು ರಾಜ್ಯದ ಭದ್ರತೆಗೆ ಸಂಬಂಧಿಸಿದ ಗಂಭೀರ ವಿಚಾರವಾಗಿದ್ದು, ಯಾವುದೇ ರಾಜಕೀಯ ಉದ್ದೇಶವಿಲ್ಲದೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದರು.

ಗೃಹ ಸಚಿವರು ಇದೇ ಜಿಲ್ಲೆಯವರಾಗಿದ್ದರೂ ಇಂತಹ ಚಟುವಟಿಕೆಗಳ ಬಗ್ಗೆ ಸರ್ಕಾರ ಇನ್ನಷ್ಟು ಎಚ್ಚರಿಕೆ ವಹಿಸಬೇಕಿತ್ತು. ಹೊರ ರಾಜ್ಯಗಳಿಂದ ಬಂದು ರಾಜ್ಯದ ವಿವಿಧ ಭಾಗಗಳಲ್ಲಿ ನೆಲೆಸಿರುವ ಕಾರ್ಮಿಕರ ಸಂಖ್ಯೆಯೂ ಹೆಚ್ಚಾಗಿದ್ದು, ಅವರ ವಾಸಸ್ಥಳ, ಉದ್ಯೋಗ ಹಾಗೂ ಗುರುತಿನ ದಾಖಲೆಗಳ ಕುರಿತು ಕಾನೂನು ಬದ್ಧವಾಗಿ ಸೂಕ್ತ ಪರಿಶೀಲನೆ ನಡೆಸಬೇಕು ಎಂದು ಹೇಳಿದರು.



ಗುಲ್ಬರ್ಗ ಜಿಲ್ಲೆಯ ಸಂಬಂಧಪಟ್ಟ ಗ್ರಾಮಗಳಲ್ಲಿ ಹೊರ ರಾಜ್ಯ ಹಾಗೂ ಹೊರ ದೇಶಗಳಿಂದ ಬಂದು ನೆಲೆಸಿರುವವರ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಬೇಕು. ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಮೂಲಕವೂ ಅಲ್ಲಿನ ಮತದಾರರು ಹಾಗೂ ನಿವಾಸಿಗಳ ಕುರಿತು ಮಾಹಿತಿ ಪರಿಶೀಲಿಸಬಹುದು ಎಂದು ಅಭಿಪ್ರಾಯಿಸಿದರು.

ಯಾರೋ ಮಾಡಿದ ತಪ್ಪಿಗೆ ರಾಜ್ಯದ ಜನರು ಬಲಿಪಶುಗಳಾಗಬಾರದು. ದೇಶ ಮತ್ತು ರಾಜ್ಯದ ಭದ್ರತೆ ಎಲ್ಲಕ್ಕಿಂತ ಮುಖ್ಯ. ದೇಶವನ್ನು ರಕ್ಷಿಸುವ ಜವಾಬ್ದಾರಿ ಹೊಂದಿರುವವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಇಂತಹ ಉಗ್ರ ಚಟುವಟಿಕೆಗಳಿಗೆ ರಾಜ್ಯದ ನೆಲದಲ್ಲಿ ಯಾವುದೇ ಅವಕಾಶ ಸಿಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಇಬ್ಬರ ಬಂಧನದ ಬಳಿಕ ಉಗ್ರ ಚಟುವಟಿಕೆ ಹಾಗೂ ಪಾಕಿಸ್ತಾನದೊಂದಿಗೆ ಸಂಪರ್ಕ ಹೊಂದಿರುವ ಆರೋಪಗಳು ಬೆಳಕಿಗೆ ಬಂದಿವೆ. ಈ ಹಿನ್ನೆಲೆಯಲ್ಲಿ ಅವರು ವಿದೇಶಕ್ಕೆ ತೆರಳಿ ಬಂದಿರುವುದು ಸೇರಿದಂತೆ ಎಲ್ಲ ವಿಚಾರಗಳ ಬಗ್ಗೆಯೂ ಸಮಗ್ರ ತನಿಖೆ ನಡೆಸಿ ಸತ್ಯಾಂಶವನ್ನು ಬಹಿರಂಗಪಡಿಸಬೇಕು. ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಕಾನೂನು ಬದ್ಧವಾಗಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಗೃಹ ಸಚಿವರು ಹಲವು ವಿಚಾರಗಳ ಕುರಿತು ಮಾತನಾಡುತ್ತಾರೆ. ಆದರೆ ರಾಜ್ಯದ ಭದ್ರತೆಗೆ ಸಂಬಂಧಿಸಿದ ಇಂತಹ ಗಂಭೀರ ಪ್ರಕರಣಗಳ ಬಗ್ಗೆಯೂ ಸ್ಪಷ್ಟವಾಗಿ ಮಾತನಾಡಬೇಕು. ದೇಶದ ಭದ್ರತೆ ವಿಚಾರದಲ್ಲಿ ಯಾವುದೇ ರಾಜಕೀಯ ಮಾಡಬಾರದು. ಮೊದಲು ನಮ್ಮ ದೇಶ ಹಾಗೂ ರಾಜ್ಯದ ಹಿತ ಮುಖ್ಯ ಎಂಬ ಮನೋಭಾವದಿಂದ ಸರ್ಕಾರ ಕಾರ್ಯ ನಿರ್ವಹಿಸಬೇಕು. ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಪ್ರಕರಣದ ಕುರಿತು ಸೂಕ್ತ ತನಿಖೆ ನಡೆಸಿ, ಉಗ್ರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಎ. ಮಂಜು ಒತ್ತಾಯಿಸಿದರು.

# ಮೂರನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಭಾರತ

• ಪ್ರಜೋದಯ ವರದಿ

**ಆಲೂರು:** ದೇಶದ ಸರ್ವತೋಮುಖ ಅಭಿವೃದ್ಧಿ ಹಿತದೃಷ್ಟಿಯಿಂದ ಏಕತೆ, ಶಾಂತಿ ಮತ್ತು ಅಭಿವೃದ್ಧಿಗೆ ನಾವೆಲ್ಲರೂ ಒಂದಾಗಿ ಶ್ರಮಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು

ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ವತಿಯಿಂದ ಮಿನಿ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ 80 ನೇ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಒಂದು ಕಾಲದಲ್ಲಿ ಯಾವುದೇ ವಿಚಾರಗಳಿಗೆ ಇತರೆ ದೇಶಗಳನ್ನು ಅವಲಂಬಿಸುವ ಪರಿಸ್ಥಿತಿ ಇತ್ತು. ಆದರೆ ಬದಲಾದ ಸನ್ನಿವೇಶಗಳಲ್ಲಿ ಬೇರೆ ದೇಶಗಳು ಭಾರತ ದೇಶವನ್ನು ಅವಲಂಬಿಸುವ ಸನ್ನಿವೇಶ ಸೃಷ್ಟಿಯಾಗಿದೆ. ಪ್ರಸ್ತುತ ಭಾರತ ದೇಶವು ಜಾಗತಿಕವಾಗಿ 5ನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದ್ದು ಕೆಲವೇ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಮೂರನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಸೂಪರ್ ಪವರ್ ದೇಶವಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.



ಧ್ವಜಾರೋಹಣ ನೆರವೇರಿಸಿದ ತಾಲೂಕು ದಂಡಾಧಿಕಾರಿ ಎಚ್. ಮಲ್ಲಿಕಾರ್ಜುನ್ ರವರು ಮಾತನಾಡಿ, ದೇಶವು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ, ತಂತ್ರಜ್ಞಾನ ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ತನ್ನದೇ ಆದಂತ ಹೆಜ್ಜೆ ಗುರುನ್ನು ಇಡೀ ಜಗತ್ತಿಗೆ ತೋರ್ಪಡಿಸಿದ್ದು, ಇಂದು ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನಲ್ಲಿ ಗುರುತಿಸುವ ಹಂತಕ್ಕೆ ಬಂದು ನಿಂತಿದೆ ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಮಾಡಲಾಯಿತು

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಇ.ಓ ಸುಬ್ರಹ್ಮಣ್ಯ ಶರ್ಮ, ಬಿ.ಇ.ಓ ಕೃಷ್ಣೇಗೌಡ, ಪಿ. ಆರ್.ಇ.ಡಿ ಎ.ಇ.ಇ ರಮೇಶ್, ಪೊಲೀಸ್ ವೃತ್ತ ನಿರೀಕ್ಷಕ ಮೋಹನ್ ರೆಡ್ಡಿ, ಪ.ಪಂ ಮುಖ್ಯಾಧಿಕಾರಿ ಮಂಜುನಾಥ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮನು, ಮುಖಂಡರುಗಳಾದ ಕೆ.ಎಸ್.ಮಂಜೇಗೌಡ, ಬಿ.ಸಿ ಶಂಕರಾಚಾರ್, ಡಿ.ಎಸ್ ಜಯಣ್ಣ, ಶ್ರೀಕಾಂತ್, ಗೇಕರವಳ್ಳಿ ಬಸವರಾಜು, ಪುಟ್ಟರಾಜು, ಅಧಿಕಾರಿಗಳು ಉಪಸ್ಥಿತರಿದ್ದರು.

ಪಟ್ಟಣದ ಆಟೋ ಚಾಲಕರ ಸಂಘ, ಎಲ್ಲ ಶಾಲೆಗಳು, ಇಲಾಖೆಗಳಲ್ಲಿ ಧ್ವಜಾರೋಹಣ ನೆರವೇರಿಸಿ ಶುಭಾಷಯ ವಿನಿಮಯ ಮಾಡಿಕೊಂಡರು.

# ಜಾತಿ ಆಧಾರಿತ ಆಚರಣೆ ಮನೆಗೆ ಮಾತ್ರ ಸೀಮಿತಗೊಳಿಸಿ

## ಬಜರಂಗದಳ ಮುಖಂಡ ಗೋವರ್ಧನ್ ಕಿವಿಮಾತು

• ಪ್ರಜೋದಯ ವರದಿ

**ಸಕಲೇಶಪುರ:** ಜಾತಿ ಆಧಾರಿತ ಆಚರಣೆಗಳನ್ನು ಮನೆಗೆ ಮಾತ್ರ ಸೀಮಿತಗೊಳಿಸಿ, ಮನೆಯ ಹೊರಗೆ ಪ್ರತಿಯೊಬ್ಬರೂ ಹಿಂದೂ ಎಂಬ ಭಾವನೆಯೊಂದಿಗೆ ಒಗ್ಗಟ್ಟಿನಿಂದ ಇರಬೇಕು ಎಂದು ಬಜರಂಗದಳ ಮುಖಂಡ ಗೋವರ್ಧನ್ ಅವರು ಕಿವಿಮಾತು ಹೇಳಿದರು.

ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಸಂಜೆ ತಾಲೂಕು ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳ ವತಿಯಿಂದ ಆಯೋಜಿಸಿದ್ದ ಅಖಂಡ ಭಾರತ ಸಂಕಲ್ಪ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಲವು ಸಾವಿರ ವರ್ಷಗಳಿಂದ ಭಾರತ ವಿವಿಧ ದಾಳಿಗಳನ್ನು ಎದುರಿಸಿದ್ದರೂ ತನ್ನ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿಕೊಂಡಿದೆ ಎಂದರಲ್ಲದೆ, ಮಹಮ್ಮದ್ ಅಲಿ ಜಿನ್ನಾ ಹಾಗೂ ಬ್ರಿಟಿಷರ ರಾಜಕೀಯ ಬೆಳವಣಿಗೆಗಳ ಪರಿಣಾಮ ದೇಶ ವಿಭಜನೆಯಾಯಿತು. ಧರ್ಮದ ಆಧಾರದ ಮೇಲೆ ದೇಶ ವಿಭಜನೆಯಾದ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ಹಿಂಸಾಚಾರ ನಡೆದಿತ್ತು ಎಂದು ಹೇಳಿದರು.



ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಯುವಜನರಿಗೆ ತಿಳಿಸುವ ಅಗತ್ಯವಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಇತಿಹಾಸವನ್ನು ಅರಿಯದವನು ಇತಿಹಾಸವನ್ನು ಸೃಷ್ಟಿಸಲಾರ ಎಂಬ ಮಾತಿನಂತೆ, ಧರ್ಮ ಹಾಗೂ ದೇಶದ ವಿಚಾರದಲ್ಲಿ ಮಕ್ಕಳಿಗೆ ಇತಿಹಾಸದ ಅರಿವು ಮೂಡಿಸಬೇಕು. ಭಾರತದ ಭಾಗವಾಗಿದ್ದ ಪ್ರದೇಶಗಳನ್ನು ಮತ್ತೆ ಅಖಂಡ ಭಾರತದ ಪರಿಕಲ್ಪನೆಯಡಿ ಒಗ್ಗೂಡಿಸುವ ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು.

ಯಸಳೂರು ಹೋಬಳಿಯ ತೆಂಕಲಗೂಡು ಮಠದ ಚನ್ನಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಹಿಂದೂಗಳು ಧಾರ್ಮಿಕ ಆಚರಣೆಗಳನ್ನು ಮರೆಯುತ್ತಿರುವುದು ಬೇಸರದ ಸಂಗತಿ. ಪೋಷಕರು ಮಕ್ಕಳಿಗೆ ಭಾರತೀಯ ಸಂಸ್ಕಾರ, ಸಂಸ್ಕೃತಿ ಹಾಗೂ ಪರಂಪರೆಯ ಕುರಿತು ತಿಳಿಸಿಕೊಡಬೇಕು. ಧರ್ಮ ರಕ್ಷಣೆಯ ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಅಂಗವಾಗಿ ಪಟ್ಟಣದ ಸಕಲೇಶ್ವರ ಸ್ವಾಮಿ ದೇವಸ್ಥಾನದಿಂದ ಪ್ರಮುಖ ಬೀದಿಗಳ ಮೂಲಕ ಗುರುವೇಗೌಡ ಕಲ್ಯಾಣ ಮಂಟಪದವರೆಗೆ ಬೃಹತ್ ಪಂಜಿನ ಮೆರವಣಿಗೆ ನಡೆಯಿತು.

ಕಾರ್ಯಕ್ರಮದಲ್ಲಿ ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮುಖ್ಯ ಅತಿಥಿ ಚಂದ್ರಣ್ಣ, ವಿಶ್ವ ಹಿಂದೂ ಪರಿಷತ್ ಜಿಲ್ಲಾ ಕಾರ್ಯದರ್ಶಿ ಹರೀಶ್ ಕರಡಿಗಾಲ, ಜಿಲ್ಲಾ ಉಪಾಧ್ಯಕ್ಷ ವಿಜಯಕುಮಾರ್, ವಿಹೆಚ್‌ಪಿ ತಾಲೂಕು ಅಧ್ಯಕ್ಷ ಬಿರಡಹಳ್ಳಿ ಬಾಲಕೃಷ್ಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ರೈತರ ಅಭ್ಯುದಯವಾಗದೆ ದೇಶ ಪ್ರಗತಿ ಕಾಣದು

• ಪ್ರಜೋದಯ ವರದಿ

**ಹೊಳೆನರಸೀಪುರ:** ಶಿಕ್ಷಣ, ಆರೋಗ್ಯ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಕಾರ್ಯಕ್ರಮ ನೀಡುವ ಜತೆಗೆ ರೈತರ ಅಭ್ಯುದಯಕ್ಕೆ ಹೆಚ್ಚಿನ ಕಾರ್ಯಕ್ರಮ ರೂಪಿಸದ ಹೊರತು ದೇಶದ ಪ್ರಗತಿ ಸಾದ್ಯವಾಗದು ಎಂದು ಶಾಸಕ ಎಚ್.ಡಿ.ರೇವಣ್ಣ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ತಾಲ್ಲೂಕು ಆಡಳಿತ ಆಚರಿಸಿದ್ದ 80ನೇ ಸ್ವಾತಂತ್ರ್ಯೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬರದ ಛಾಯೆ ಆವರಿಸಿದೆ. ಇದರಿಂದ ಬೆಳೆ ನಷ್ಟ ಹೊಂದಿದ ರೈತರನ್ನಷ್ಟೇ ಅಲ್ಲದೆ, ಬೆಳೆ ಬೆಳೆಯಲಾಗದ ಸ್ಥಿತಿಯಲ್ಲಿರುವ ರೈತರನ್ನು ಗುರುತಿಸಿ ಪರಿಹಾರ ಧನ ನೀಡಬೇಕು. ಜನರ ಆರೋಗ್ಯ ಸುದಾರಣೆಯಾದರೆ ಮಾತ್ರವೇ ಆರೋಗ್ಯಯುತ ಸಮಾಜ ನಿರ್ಮಾಣ ಸಾದ್ಯ. ಇವುಗಳತ್ತ ಎರಡೂ ರಾಷ್ಟ್ರೀಯ ಪಕ್ಷಗಳು ಗಮನ ಕೊಡಬೇಕು. ರಾಜ್ಯ ಸರಕಾರ ಖಾಸಗಿ ಶಾಲೆಗಳಿಗೆ ಜೋತು ಬಿದ್ದಂತೆ ಇದೆ. ಖಾಸಗಿ ಶಾಲೆಗಳಿಗೆ ಸರಕಾರಿ ಶಾಲೆಗಳನ್ನು ಬಲಿಕೊಡುತ್ತಿರುವ ದಿಸೆ ಬದಲಾಗಬೇಕು. ಪ್ರತಿ ಗ್ರಾಮೀಣ ಹಂತದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆದು ಸಕಲ ಶೈಕ್ಷಣಿಕ ಸವಲತ್ತು ಮತ್ತು ಗುಣಮಟ್ಟದ ಶಿಕ್ಷಣ ಕೊಟ್ಟರೆ ಮಾತ್ರ ಸರಕಾರಿ ಶಾಲೆ, ಕಾಲೇಜು ಉಳಿಯುತ್ತದೆ ಎಂದರು.



ಧ್ವಜಾರೋಹಣ ನಡೆಸಿದ ತಹಸೀಲ್ದಾರ್ ವೈ.ಎಂ.ರೇಣುಕುಮಾರ್ ಮಾತನಾಡಿ, ಎಲ್ಲರೂ ಅವರ ಕಾರ್ಯಸ್ಥಾನದಲ್ಲಿ ದೇಶದ ಪ್ರಗತಿಯನ್ನು ಗಮನದಲ್ಲಿ ಇಟ್ಟುಕೊಂಡು ಕಾಳಜಿ ಕಾರ್ಯ ನಡೆಸಬೇಕು ಎಂದರು.

ಪಟ್ಟಣದ ಸೋಷಿಯಲ್‌ಕ್ಲಬ್‌ನ ವತಿಯಿಂದ ಸ್ವಾತಂತ್ರೋತ್ಸವದಲ್ಲಿ ಭಾಗಿಯಾಗಿದ್ದ ಎಲ್ಲ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಬೆಳಗಿನ ಉಪಹಾರ ಉಚಿತವಾಗಿ ವಿತರಿಸಿದರು. ಭಾರತ ಮಾತೆಯ ಭಾವಚಿತ್ರವನ್ನು ಪಟ್ಟಣದಲ್ಲಿ ಮೆರವಣಿಗೆ ನಡೆಸಲಾಯಿತು. ಆಕರ್ಶಕ ಪಥಸಂಚಲನ, ನಾನಾ ಶಾಲೆಗಳಿಂದ ದೇಶಭಕ್ತಿಗೀತೆಗೆ ನೃತ್ಯ ಪ್ರದರ್ಶಿಸಲಾಯಿತು. ನಿವೃತ್ತ ಯೋಧ ಯೋಗೇಶ್, ತಾಲೂಕಿನ ದೊಡ್ಡಳ್ಳಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಹಾಗೂ ಟಿವಿ ಕಾರ್ಯಕ್ರಮವಾದ ಡ್ರಾಮ ಜ್ಯೂನಿಯರ್ಸ್ ಬಾಲನಟ ಮಾದೇಶ, ಹಾರಗೋಡನಹಳ್ಳಿಯ ಪ್ರಗತಿ ಪರ ಕೃಷಿಕ ಬೀರೇಶ್ ಹಾಗೂ ಸೀತಾಲಕ್ಷ್ಮಿ ರಂಗನಾಥಸ್ವಾಮಿ ಚಾರಿಟಬಲ್ ಟ್ರಸ್ಟ್‌ನ ಸಮಾಜಿಕ ಸೇವೆಯನ್ನು ಗುರುತಿಸಿ ಎನ್.ಆರ್. ವಿಜಯಕುಮಾರ್ ಅವರನ್ನು ಸನ್ಮಾನಿಸಲಾಯಿತು.

ತಾಪಂ ಇಒ ಮುನಿರಾಜ್, ಕಸಾಪ ಅಧ್ಯಕ್ಷ ಆರ್.ಬಿ.ಪುಟ್ಟೇಗೌಡ, ಪುರಸಭಾ ಮುಖ್ಯಾಧಿಕಾರಿ ಶಿವಶಂಕರ್, ಚುಸಾಪ ಅಧ್ಯಕ್ಷೆ ಪ್ರೇಮಾಮಂಜುನಾಥ್, ದೈಹಿಕ ಶಿಕ್ಷಣ ತಾಲೂಕು ನಿರ್ದೇಶಕ ಸುಜಾತ್‌ಅಲಿ ಇತರರಿದ್ದರು.

# ಮಹನೀಯರ ಕನಸಿನ ಭಾರತಕ್ಕೆ ಎಲ್ಲರೂ ಶ್ರಮಿಸಬೇಕು

• ಪ್ರಜೋದಯ ವರದಿ

**ಅರಕಲಗೂಡು:** ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರನ್ನು ಸ್ಮರಿಸುವುದರ ಜತೆಗೆ, ಅವರು ಕಂಡ ಕನಸಿನ ಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಶಾಸಕ ಎ.ಮಂಜು ಅವರು ಕರೆ ನೀಡಿದರು.

ಪಟ್ಟಣದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಶನಿವಾರ ಆಯೋಜಿಸಿದ್ದ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಾತಿ, ಧರ್ಮ, ಭಾಷೆ ಹಾಗೂ ಪಕ್ಷಭೇದಗಳನ್ನು ಮೀರಿ ಕರ್ನಾಟಕ ಹಾಗೂ ಭಾರತವನ್ನು ಮತ್ತಷ್ಟು ಬಲಿಷ್ಠಗೊಳಿಸಲು ಎಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸಬೇಕು. ಸಮಾನತೆ, ನ್ಯಾಯ, ಶಿಕ್ಷಣ, ಉದ್ಯೋಗ, ರೈತರ ಕಲ್ಯಾಣ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಹೇಳಿದರು.



ತಹಸೀಲ್ದಾರ್ ಕೆ.ಸಿ.ಸೌಮ್ಯ ಅವರು ಧ್ವಜಾರೋಹಣ ನೆರವೇರಿಸಿ ಧ್ವಜ ಸಂದೇಶ ನೀಡಿ, ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನೇ ತ್ಯಾಗ ಮಾಡಿದ ಅಸಂಖ್ಯಾತ ಮಹನೀಯರನ್ನು ಸ್ಮರಿಸಿದಾಗ ಮನಸ್ಸು ಭಾವುಕವಾಗುತ್ತದೆ. ಸ್ವಾತಂತ್ರ್ಯವೆದರೆ ಕೇವಲ ಒಂದು ದಿನದ ಸಂಭ್ರಮವಲ್ಲ. ಅದು ಸಾವಿರಾರು ತ್ಯಾಗಗಳ ಫಲ, ಕೋಟ್ಯಂತರ ಭಾರತೀಯರ ಕನಸು ಹಾಗೂ ನಮ್ಮ ಪೂರ್ವಜರ ಹೋರಾಟದ ಪ್ರತೀಕವಾಗಿದೆ ಎಂದು ಹೇಳಿದರು.

ಮಹಾತ್ಮ ಗಾಂಧೀಜಿ, ನೇತಾಜಿ ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಚಂದ್ರಶೇಖರ ಆಜಾದ್ ಸೇರಿದಂತೆ ಅನೇಕ ಸ್ವಾತಂತ್ರ್ಯ ಹೋರಾಟಗಾರರು ದೇಶಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ. ಅವರ ತ್ಯಾಗ ಮತ್ತು ಹೋರಾಟದ ಫಲವಾಗಿ ಇಂದು ನಾವು ಸ್ವತಂತ್ರ ಭಾರತದಲ್ಲಿ ಗೌರವದಿಂದ ಬದುಕುತ್ತಿದ್ದೇವೆ. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದರು.

ಸ್ವಾತಂತ್ರ್ಯದ ಮೌಲ್ಯವನ್ನು ಮುಂದಿನ ಪೀಳಿಗೆಗೆ ತಿಳಿಸುವುದರ ಜತೆಗೆ ದೇಶದ ಏಕತೆ, ಅಖಂಡತೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರ ಮೇಲಿದೆ ಎಂದು ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಇಒ ಶ್ರೀನಿವಾಸ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರಕುಮಾರ್, ಬಿಇಒ ನಾರಾಯಣ, ತಾಲೂಕು ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಯಿತು.

ಬಳಿಕ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳಿಗೆ ನೃತ್ಯ ಪ್ರದರ್ಶಿಸಿ ನೆರೆದಿದ್ದವರ ಗಮನ ಸೆಳೆದರು. ವಿದ್ಯಾರ್ಥಿಗಳ ದೇಶಭಕ್ತಿ ಹಾಗೂ ರಾಷ್ಟ್ರಾಭಿಮಾನದ ಸಂದೇಶ ಸಾರಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಸ್ವಾತಂತ್ರ್ಯ ದಿನಾಚರಣೆಗೆ ಮತ್ತಷ್ಟು ಮೆರುಗು ತಂದವು.

## ಆ. 18 ರಿಂದ ಉಪ ವಿಭಾಗಾಧಿಕಾರಿ ನ್ಯಾಯಾಲಯ

ಆಲೂರು: ಪಟ್ಟಣದ ಮಿನಿ ವಿದಾನಸೌಧ ಸಭಾಂಗಣದಲ್ಲಿ ಆ. 18 ರಿಂದ ಪ್ರತಿ ಮಂಗಳವಾರ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ ನಡೆಯಲಿದೆ ಎಂದು ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎಂ. ಎಸ್. ಮಹೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಲ್ಲಿವರೆಗೆ ತಾಲ್ಲೂಕಿನ ಸಾರ್ವಜನಿಕರು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಸಕಲೇಶಪುರಕ್ಕೆ ಹೋಗಬೇಕಿತ್ತು, ಇನ್ನು ಮುಂದೆ ಆಲೂರು ತಾಲ್ಲೂಕಿನ ತಹಸೀಲ್ದಾರ್ ರವರ ಕಚೇರಿಯಲ್ಲಿ ಪ್ರಕರಣಗಳನ್ನು ತೀರ್ಮಾನ ಮಾಡಲು ಆಲೂರಿಗೆ ಆಗಮಿಸುತ್ತಾರೆ. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್. ಎ.ಎನ್.ಸಿ.ಆರ್. ಹಿರಿಯ ನಾಗರಿಕರ ವ್ಯಾಜ್ಯ ಸೇರಿದಂತೆ ಎಲ್ಲಾ ವ್ಯಾಜ್ಯಗಳನ್ನು ಪ್ರತಿ ಮಂಗಳವಾರ ಮಧ್ಯಾಹ್ನ ಮೂರು ಗಂಟೆಗೆ ಸಕಲೇಶಪುರ ಉಪ ವಿಭಾಗಾಧಿಕಾರಿಗಳು ಕೈಗೆತ್ತಿಕೊಳ್ಳುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಕಲೇಶಪುರದಲ್ಲಿ ಅದ್ದೂರಿಯಾಗಿ ನಡೆದ 80ನೇ ಸ್ವಾತಂತ್ರ್ಯೋತ್ಸವ

# ಪ್ರತಿಯೊಬ್ಬರೂ ಸ್ವಾತಂತ್ರ್ಯ ಹೋರಾಟದ ಇತಿಹಾಸ ತಿಳಿಯಬೇಕು

• ಪ್ರಜೋದಯ ವರದಿ

**ಸಕಲೇಶಪುರ:** ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ವಿದ್ಯಾರ್ಥಿಗಳು ಹಾಗೂ ಪ್ರತಿಯೊಬ್ಬ ನಾಗರಿಕರು ತಿಳಿದುಕೊಳ್ಳಬೇಕು. ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದವರ ಜೀವನ ಹಾಗೂ ಹೋರಾಟವನ್ನು ಅರಿತು ದೇಶದ ಅಭಿವೃದ್ಧಿಗೆ ಪ್ರತಿಯೊಬ್ಬರೂ ಕೊಡುಗೆ ನೀಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಸುಭಾಷ್ ಮೈದಾನದಲ್ಲಿ ಶನಿವಾರ ನಡೆದ 80ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಸ್ವಾತಂತ್ರ್ಯವು ಸುಲಭವಾಗಿ ದೊರೆತದ್ದಲ್ಲ. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ದೇಶದ ಸಂಪತ್ತನ್ನು ಕೊಳ್ಳೆ ಹೊಡೆದು ಸುಮಾರು 200 ವರ್ಷಗಳ ಕಾಲ ಆಳಿದರು. ಭಗತ್ ಸಿಂಗ್ ಸೇರಿದಂತೆ ಅನೇಕರು ದೇಶಕ್ಕಾಗಿ ತಮ್ಮ ಜೀವನವನ್ನೇ ಅರ್ಪಿಸಿದ್ದಾರೆ. ಇಂತಹ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆಯನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ದೇಶದ ಇತಿಹಾಸದ ಅರಿವು ಮೂಡಿಸುವ ಜವಾಬ್ದಾರಿ ಶಿಕ್ಷಕರು, ಪೋಷಕರು ಹಾಗೂ ಸಮಾಜದ ಮೇಲಿದೆ ಎಂದರು. ದೇಶ ಮೊದಲು ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಮೂಡಬೇಕು. ಸಕಲೇಶಪುರದ ಪ್ರಕೃತಿ ಸೌಂದರ್ಯ ಹಾಗೂ ಪ್ರವಾಸಿ ತಾಣಗಳನ್ನು ಸಂರಕ್ಷಿಸಿ ತಾಲೂಕನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು.



ಸರ್ಕಾರಿ ಕಚೇರಿಗಳಿಗೆ ಬರುವ ಸಾಮಾನ್ಯ ಜನರಿಗೆ ಗೌರವಯುತವಾಗಿ ಸ್ಪಂದಿಸಿ ಅವರ ಕೆಲಸಗಳನ್ನು ಮಾಡಿಕೊಡುವ ವಾತಾವರಣ ನಿರ್ಮಾಣವಾಗಬೇಕು. ಬಡವರು ತಮ್ಮ ದಿನದ ಕೂಲಿಯನ್ನೂ ಲೆಕ್ಕ ಹಾಕಿಕೊಂಡು ಕಚೇರಿಗಳಿಗೆ ಬರುತ್ತಾರೆ. ಹೀಗಾಗಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಾರ್ವಜನಿಕರ ಹಿತ ಕಾಪಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ಭಾರತಕ್ಕೆ ಸ್ವಾತಂತ್ರ್ಯವು ಯಾರೋ ಹೂವಿನ ಬುಟ್ಟಿಯಲ್ಲಿ ತಂದುಕೊಟ್ಟದ್ದಲ್ಲ. ಸುಮಾರು 200 ವರ್ಷಗಳ ಬ್ರಿಟಿಷರ ಶೋಷಣೆ ಹಾಗೂ ದಮನಕಾರಿ ಆಡಳಿತವನ್ನು ದೇಶ ಎದುರಿಸಿತ್ತು. ದಾದಾಭಾಯಿ ನೌರೋಜಿ ಸೇರಿದಂತೆ ಹಲವು ನಾಯಕರು ಬ್ರಿಟಿಷರು ಭಾರತದ ಸಂಪತ್ತನ್ನು ಕೊಳ್ಳೆ ಹೊಡೆದ ರೀತಿಯನ್ನು ವಿವರಿಸಿದ್ದರು. ಲಾಲಾ ಲಜಪತ್ ರಾಯ್, ಬಾಲ ಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್ ಸೇರಿದಂತೆ ಅನೇಕ ನಾಯಕರು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಹಾತ್ಮ ಗಾಂಧೀಜಿಯವರ ಅಹಿಂಸೆ ಹಾಗೂ ಸತ್ಯಾಗ್ರಹದ ಮೂಲಕ ಹೋರಾಟಕ್ಕೆ ಹೊಸ ದಿಕ್ಕು ದೊರೆಯಿತು. ಸ್ವಾತಂತ್ರ್ಯ ಹೋರಾಟಗಾರರ ತ್ಯಾಗವನ್ನು ಸ್ಮರಿಸಿ ದೇಶದ ಏಕತೆ ಹಾಗೂ ಅಭಿವೃದ್ಧಿಗೆ ಎಲ್ಲರೂ ಕೊಡುಗೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಾಮಾಜಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫಿಸ್, ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಗಂಗಾಧರ್, ತಹಸೀಲ್ದಾರ್ ಸುಪ್ರೀತ, ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಲತಾ, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ಸೀರೆಸ್ತೇದಾರ್ ರವಿ, ಜನಾರ್ಧನ, ಕಂದಾಯ ಇಲಾಖೆಯ ದಾನ್ ಪ್ರಕಾಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಮರದ ದಿಮ್ಮಿ ಸಾಗಿಸುತ್ತಿದ್ದ ವಾಹನ ವಶ



**ಸಕಲೇಶಪುರ:** ಅಕ್ರಮವಾಗಿ ಮರದ ದಿಮ್ಮಿಗಳನ್ನು ಸಾಗಿಸುತ್ತಿದ್ದ ವಾಹನವನ್ನು ಅರಣ್ಯ ಇಲಾಖೆ ಸಿಬ್ಬಂದಿ ಪತ್ತೆಹಚ್ಚಿ ವಶಕ್ಕೆ ಪಡೆದಿರುವ ಘಟನೆ ಸಕಲೇಶಪುರ ವಲಯದ ಬೆಳಗೋಡು ಶಾಖಾ ವ್ಯಾಪ್ತಿಯಲ್ಲಿ ನಡೆದಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ಹೆಚ್.ಆರ್.ಹೇಮಂತ್ ಕುಮಾರ್ ಹಾಗು ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಬಿಲ್ಲೆಟ್ಸ್ ಸಾಗಿಸುತ್ತಿದ್ದ ವಾಹನವನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಗಳಾದ ಮಂಜುನಾಥ್, ಕೆ.ಮೋಹನ್ ಕುಮಾರ್, ಅರ್ಜುನ್, ಮಹದೇವಪ್ಪ, ಧನಂಜಯ್, ಗಸ್ತು ಅರಣ್ಯ ಪಾಲಕರಾದ ಉಮೇಶ್, ಕುಮಾರ್ ಪಾಲ್ಗೊಂಡಿದ್ದರು.

# ಜಂತುಹುಳು ಮಾತ್ರೆಯಿಂದ ರಕ್ತಹೀನತೆ ನಿಯಂತ್ರಣ

## ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಸ್ನೇಹಾ

• ಪ್ರಜೋದಯ ವರದಿ

**ಆಲೂರು:** ಜಂತುಹುಳು ನಿವಾರಣೆ ಮಾತ್ರೆ ಸೇವಿಸುವುದರಿಂದ ರಕ್ತಹೀನತೆ ನಿಯಂತ್ರಿಸಬಹುದಲ್ಲದೆ ಪೌಷ್ಟಿಕಾಂಶ ಹೀರಿಕೆಯನ್ನು ಸುಧಾರಿಸುತ್ತದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಸ್ನೇಹಾ ತಿಳಿಸಿದರು.

ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹ ಹಾಗೂ ರಾಷ್ಟ್ರೀಯ ಜಂತುಹುಳು ನಿವಾರಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಜಂತುಹುಳು ನಿವಾರಣೆ ಮಾತ್ರೆ ಸೇವಿಸುವುದರಿಂದ ಮಕ್ಕಳಲ್ಲಿ ಏಕಾಗ್ರತೆ, ಕಲಿಕಾ ಸಾಮರ್ಥ್ಯ ಹಾಗೂ ಶಾಲೆ, ಅಂಗನವಾಡಿ ಕೇಂದ್ರಗಳಲ್ಲಿ ಹಾಜರಾತಿಯನ್ನು ಸುಧಾರಿಸಲು ನೆರವಾಗುತ್ತದೆ. ಕೆಲಸದ ಸಾಮರ್ಥ್ಯ ಹಾಗು ಜೀವನೋಪಾಯದ ಅವಕಾಶಗಳನ್ನು ವೃದ್ಧಿಸಲು ನೆರವಾಗುತ್ತದೆ ಎಂದು ಸಲಹೆ ನೀಡಿದರು.

1 ರಿಂದ 19 ವಯಸ್ಸಿನ ಎಲ್ಲ ಮಕ್ಕಳಿಗೆ ಜಂತುಹುಳು ನಿವಾರಣೆ ಅಲ್ಬೆಂಡಝೋಲ್ ಮಾತ್ರೆ ಕೊಡಲಾಗುವುದು. ದಾದಿಯರು ಮನೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನೊಂದಾವಣಿಯಾಗಿರುವ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿಯನ್ನು ತಯಾರಿಸಿ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಬೇಕು.



ಜಂತುಹುಳು ನಿವಾರಣೆ ಮಾತ್ರೆಯನ್ನು ಅಗಿದು ನುಂಗಬೇಕು. ಅನಾರೋಗ್ಯಪೀಡಿತ ಅಥವಾ ಬೇರೆ ಔಷಧವನ್ನು ತೆಗೆದುಕೊಂಡಿರುವ ಮಕ್ಕಳಿಗೆ ಜುಂತುಹುಳು ನಾಶಕ ಮಾತ್ರೆ ನೀಡಬಾರದು. ಉಸಿರುಗಟ್ಟುವುದನ್ನು ತಪ್ಪಿಸಲು ಶುದ್ಧ ನೀರನ್ನು ಕುಡಿಸಬೇಕು. ಅನಿವಾರ್ಯ ಕಾರಣದಿಂದ ತಪ್ಪಿಸಿಕೊಂಡಿದ್ದ ಮಕ್ಕಳಿಗೆ ಅನುಸರಣ ದಿನವೆಂದು ಪರಿಗಣಿಸಿ ಮಾತ್ರೆಗಳನ್ನು ಕೊಡಲಾಗುವುದು ಎಂದು ಹೇಳಿದರು.

ಯಾವುದೇ ಕಾರಣಕ್ಕೂ ಮಕ್ಕಳಿಗೆ ಜಂತುಹುಳು ಮಾತ್ರೆ ನೀಡುವುದನ್ನು ಪೋಷಕರು ತಪ್ಪಿಸಬಾರದು. ಇದರಿಂದ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಹಾಗೆಯೇ ಆರೋಗ್ಯದಲ್ಲಿಯೂ ಏರು ಪೇರಾಗುತ್ತದೆ ಎಂದರು.

ಇದೆ ಸಂದರ್ಭದಲ್ಲಿ ಗರ್ಭಿಣಿಯರು, ಬಾಣಂತಿಯರಿಗೆ ಎದೆ ಹಾಲಿನ ಮಹತ್ವದ ಕುರಿತು ಜಾಗೃತಿ ಮೂಡಿಸಲಾಯಿತು. ಆರೋಗ್ಯ ಶಿಕ್ಷಣ ನೀಡಿ ಪೌಷ್ಟಿಕಾಂಶವಿರುವ ಔಷಧ ಮತ್ತು ಮೊಟ್ಟೆಗಳನ್ನು ವಿತರಿಸಲಾಯಿತು.

ಕಾರ್ಯಕ್ರಮ ದಲ್ಲಿ ಆಲೂರು ತಾಲೂಕು, ರೋಟರಿ ಸಂಸ್ಥೆಯ ಅಧ್ಯಕ್ಷರು, ಪದಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ಸಿಬ್ಬಂದಿ ವರ್ಗ, ಗ್ರಾಮಸ್ಥರು ಹಾಗೂ ಸಂಘ-ಸಂಸ್ಥೆ ಪದಾಧಿಕಾರಿಗಳು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ರಾಜ್ಯದ ಅಭಿವೃದ್ಧಿ ತೇರನ್ನು ಒಟ್ಟಾಗಿ ಎಳೆಯೋಣ

## ಕನ್ನಡ ಕುಲಕೋಟಿಯ ಕೈಗಳು ನನ್ನ ಜೊತೆ ಕೈಜೋಡಿಸಬೇಕು | ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜ್ಯದ ಜನತೆಗೆ ಕರೆ

ಬೆಂಗಳೂರು: ರಾಜ್ಯದ ಅಭಿವೃದ್ಧಿಯ ತೇರನ್ನು ಎಳೆಯಲು ಕೇವಲ ಎರಡು ಕೈಗಳು ಸಾಲುವುದಿಲ್ಲ. ಕನ್ನಡ ಕುಲಕೋಟಿಯ ಕೈಗಳು ನನ್ನ ಜೊತೆ ಕೈಜೋಡಿಸಬೇಕು. ಬನ್ನಿ, ಅಭಿವೃದ್ಧಿಯ ತೇರನ್ನು ಒಟ್ಟಾಗಿ ಎಳೆಯೋಣ ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಜನತೆಗೆ ಕರೆ ನೀಡಿದರು.

ಮಾಣಿಕ್ ಷಾ ಮೈದಾನದಲ್ಲಿ ಶನಿವಾರ ನಡೆದ 80ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ ರಾಜ್ಯದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ನನ್ನನ್ನು ನಂಬಿ ಇಲ್ಲಿಯವರೆಗೆ ಕರೆತಂದ ನಾಡಿನ ಜನತೆಗೆ ನಾನು ''ಸಾಕ್ಷಿಗುಡ್ಡೆ'' ಉಳಿಸುತ್ತೇನೆ. ಕರ್ನಾಟಕದ ಅಭಿವೃದ್ಧಿ ಮತ್ತು ಭಾರತದ ಅಭಿವೃದ್ಧಿ ಒಂದಕ್ಕೊಂದು ಪೂರಕವಾಗಿದ್ದು, ಜ್ಞಾನ, ವಿಜ್ಞಾನ, ತಂತ್ರಜ್ಞಾನ, ಕೈಗಾರಿಕೆ, ಕೃಷಿ, ಆರ್ಥಿಕತೆ ಹಾಗೂ ಸಂಸ್ಕೃತಿಯಲ್ಲಿ ದೇಶಕ್ಕೆ ದಾರಿ ತೋರಿಸುತ್ತಿರುವ ಕರ್ನಾಟಕದ ಶಕ್ತಿಯನ್ನು ಮತ್ತಷ್ಟು ಬೆಳೆಸುವುದು ಸರ್ಕಾರದ ಗುರಿಯಾಗಿದೆ ಎಂದು ಹೇಳಿದರು.

**ಮಾನವ ಧರ್ಮಕ್ಕೆ ಜಯವಾಗಲಿ**

ಮಾನವ ಧರ್ಮಕ್ಕೆ ಜಯವಾಗಲಿ ಎಂದು ಹೇಳಿದ ಮುಖ್ಯಮಂತ್ರಿಯವರು, ವಿಶ್ವ ಮಾನವ ಸಂದೇಶ ಸಾರಿದ ಕುವೆಂಪು ಅವರ ಅನಿಕೇತನದ ಆಶಯವನ್ನು ನೆನಪಿಸಿಕೊಂಡರು.



ನೂರು ಮತದ ಹೊಟ್ಟ ತೂರಿ/ ಎಲ್ಲ ತತ್ವದ ಎಲ್ಲೆ ಮೀರಿ/ ನಿರ್ದಿಗಂತವಾಗಿ ಏರಿ/ ಓ ನನ್ನ ಚೇತನ/ ಆಗು ನೀ ಅನಿಕೇತನ, ಕವನದ ಸಾಲುಗಳನ್ನು ಓದಿ ಕನ್ನಡ ಮಣ್ಣಿನ ಮೌಲ್ಯಗಳನ್ನು ನಿತ್ಯದ ಬದುಕಿನಲ್ಲಿ ಪಾಲಿಸೋಣ ಎಂದು ಕರೆ ನೀಡಿದರು.

**2047ರ ವೇಳೆಗೆ 320 ಲಕ್ಷ ಕೋಟಿ ರೂ. ಆರ್ಥಿಕತೆಯ ಗುರಿ**

ಕರ್ನಾಟಕದ ತಲಾ ಆದಾಯ 4.33 ಲಕ್ಷ ರೂ. ತಲುಪಿದ್ದು, ಜಿಎಸ್ಟಿ ಮತ್ತು ಆದಾಯ ತೆರಿಗೆ ಸಂಗ್ರಹಣೆಯಲ್ಲಿ ರಾಜ್ಯ ಎರಡನೇ ಸ್ಥಾನದ ಲ್ಲಿದೆ. ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿಕೆ ಮತ್ತು ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡುವ ಮೂಲಕ 2047ರ ವೇಳೆಗೆ ಕರ್ನಾ ಟಕದ ಆರ್ಥಿಕತೆಯನ್ನು 3 ಟ್ರಿಲಿಯನ್ ಡಾಲರ್, ಅಂದರೆ 320 ಲಕ್ಷ ಕೋಟಿ ರೂ.ಗೆ ಕೊಂಡೊಯ್ಯುವ ಗುರಿ ಹೊಂದಲಾಗಿದೆ ಎಂದರು.

**ಮುಖ್ಯಮಂತ್ರಿ ರೈತ ಚೈತನ್ಯ, ರೈತ ಮಿತ್ರ ಯೋಜನೆ ಜಾರಿ:** ರೈತರ ಅನುಭವಕ್ಕೆ ಆಧುನಿಕ ತಂತ್ರಜ್ಞಾನವನ್ನು ಜೋಡಿಸಲು ಮುಖ್ಯಮಂತ್ರಿ ರೈತ ಚೈತನ್ಯ ಯೋಜನೆ ಜಾರಿಯಾಗಲಿದ್ದು, ಡ್ರೋನ್ ಮತ್ತು ಉಪಗ್ರಹ ಚಿತ್ರಗಳ ಮೂಲಕ ಬೆಳೆ ಸಮೀಕ್ಷೆ ನಡೆಸಲಾಗುವುದು. ಸಣ್ಣ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆಯಲು ರೈತ ಮಿತ್ರ ಯೋಜನೆ ಜಾರಿಗೊಳಿಸಲಾಗುವುದು. ಮೂರು ಎಕರೆ ಅಥವಾ ಅದಕ್ಕಿಂತ ಕಡಿಮೆ ಭೂಮಿ ಹೊಂದಿರುವ ರೈತರಿಗೆ ಬಾಡಿಗೆ ಶುಲ್ಕದ ಮೇಲೆ ಶೇ 50 ರಷ್ಟು ಸಹಾಯಧನ ನೀಡಲಾಗುವುದು ಎಂದು ಅಭಯ ನೀಡಿದರು.

ಕೃಷಿ ಆರ್ಥಿಕತೆಯ ಬೆನ್ನೆಲುಬಾಗಿದ್ದು, ಬೆಳೆ ವಿಮಾ ಯೋಜನೆಯಡಿ 12.35 ಲಕ್ಷ ರೈತರಿಗೆ 1,300 ಕೋಟಿ ರೂಪಾಯಿ ಪರಿಹಾರ ನೀಡಲಾಗಿದೆ. 25 ಲಕ್ಷ ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದಾರೆ. 2 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ವಿಸ್ತರಿಸಲಾಗಿದ್ದು, 184 ಹೈಟೆಕ್ ಹಾರ್ವೆಸ್ಟರ್ ಹಬ್ ಗಳನ್ನು ಸ್ಥಾಪಿಸಲಾಗಿದೆ ಎಂದು ವಿವರಿಸಿದರು.

### ಒಂದು ಲಕ್ಷ ಹೊಸ ಉದ್ಯೋಗ ಸೃಷ್ಟಿ ಗುರಿ

ಉದ್ಯೋಗಾಕಾಂಕ್ಷಿಗಳಿಗಾಗಿ ಮುಖ್ಯಮಂತ್ರಿ ಉದ್ಯೋಗ ಸಂಕಲ್ಪ ಯೋಜನೆ ಆರಂಭಿಸಲಾಗುತ್ತಿದ್ದು, ಸರ್ಕಾರಿ ವಲಯದ 72 ಸಾವಿರ ಪ್ರಮುಖ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಮುಂದಿನ ಆರು ತಿಂಗಳಲ್ಲಿ ಎಲ್ಲಾ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗುವುದು. ಹಿಂದುಳಿದ ಹತ್ತು ಜಿಲ್ಲೆಗಳಲ್ಲಿ ಉದ್ಯೋಗ ಸೃಷ್ಟಿಸುವ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲು ಉದ್ಯೋಗ ನಿಧಿ ಯೋಜನೆ ಜಾರಿಯಾಗಲಿದ್ದು, ಪ್ರತಿ ಹೊಸ ಉದ್ಯೋಗಕ್ಕೆ ತಿಂಗಳಿಗೆ 2,500 ರೂ. ಪ್ರೋತ್ಸಾಹಧನ ನೀಡಲಾಗುವುದು. ಇದರಿಂದ ಒಂದು ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಸಿಎಂ ಡಿ.ಕೆ.ಶಿ. ಹೇಳಿದರು.

**ಯುವ ಕರ್ನಾಟಕ ನವ ಭಾರತ;** ಯುವ ಕರ್ನಾಟಕನವ ಭಾರತ ನಮ್ಮ ಧ್ಯೇಯವಾಕ್ಯ. ಯುವಜನರ ಭವಿಷ್ಯ ರೂಪಿಸುವ ಸಲುವಾಗಿ ಹೆಚ್ಚಿನ ಅನುದಾನ ನೀಡಲಾಗುತ್ತಿದೆ. ರಾಜ್ಯದ ಶಾಲೆಗಳಲ್ಲಿ 6ನೇ ತರಗತಿಯಿಂದಲೇ ಎಐ ಪರಿಚಯಿಸುವುದರ ಜೊತೆಗೆ ಎಐ ಅಕ್ಷರ ಅಭಿಯಾನ ಮತ್ತು ಕೋಡಿಂಗ್ ಗುರುಕುಲ ಆರಂಭಿಸಲಾಗುತ್ತಿದೆ. ಬೆಂಗಳೂರಿನಲ್ಲಿ ದೇಶದ ಪ್ರಪ್ರಥಮ ಸರ್ಕಾರಿ ಸ್ವಾಮ್ಯದ ಎಐ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು ಹಾಗೂ ಎಐ ಹಬ್‌ಗಳನ್ನು ನಿರ್ಮಿಸಲಾಗುವುದು ಎಂದು ಅವರು ಘೋಷಿಸಿದರು.

ರಾಜ್ಯದಲ್ಲಿ 10 ಸಾವಿರ ಭಾರತ್ ಜೋಡೋ ಯುವ ಸಂಘಗಳನ್ನು ಸ್ಥಾಪಿಸಲಾಗುತ್ತಿದ್ದು, ಪ್ರತಿ ಸಂಘಕ್ಕೆ 10 ಲಕ್ಷದಂತೆ ವಾರ್ಷಿಕ 1,000 ಕೋಟಿ ಅನುದಾನ ಒದಗಿಸಲಾಗುವುದು. ಎಂದು ತಿಳಿಸಿದರು.

**ಜಲ ಭದ್ರತೆಗೆ ಆದ್ಯತೆ; ನವೆಂಬರ್ ವೇಳೆಗೆ ತುಮಕೂರು ಜಿಲ್ಲೆಗೆ ಎತ್ತಿನಹೊಳೆ ನೀರು**

ನೀರಿಗಿಂತ ಅಮೂಲ್ಯವಾದುದು ಮತ್ತೊಂದಿಲ್ಲ, ಜಲ ಭದ್ರತೆ ಸರ್ಕಾರದ ಮೊದಲ ಆದ್ಯತೆ. ಈ ವರ್ಷ 16 ಸಾವಿರ ಕೋಟಿ ರೂ. ಮೊತ್ತದ 112 ಪ್ರಮುಖ ಜಲಸಂಪನ್ಮೂಲ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಮೊದಲ ಹಂತ ಪೂರ್ಣಗೊಳ್ಳುತ್ತಿದ್ದು, ನವೆಂಬರ್ ವೇಳೆಗೆ ತುಮಕೂರು ಜಿಲ್ಲೆಗೆ ನೀರು ತಲುಪಲಿದೆ ಎಂದರು.

**ಮೂಲಸೌಕರ್ಯಕ್ಕೆ ವೇಗ**

ಕಳೆದ ಒಂದು ವರ್ಷದಲ್ಲಿ 1,663 ಕಿ.ಮೀ. ರಾಜ್ಯ ಹೆದ್ದಾರಿ, 3,000 ಕಿ.ಮೀ. ಪ್ರಮುಖ ಜಿಲ್ಲಾ ರಸ್ತೆಗಳು ಹಾಗೂ 125 ಹೊಸ ಸೇತುವೆಗಳನ್ನು ನಿರ್ಮಿಸಲಾಗಿದೆ. ಪ್ರಗತಿಪಥ ಯೋಜನೆಯಡಿ 5,200 ಕೋಟಿ ರೂ. ಹೂಡಿಕೆಯೊಂದಿಗೆ 7,100 ಕಿ.ಮೀ. ಗ್ರಾಮೀಣ ರಸ್ತೆಗಳ ಅಭಿವೃದ್ಧಿ ನಡೆಯುತ್ತಿದೆ. ಬೆಂಗಳೂರು ಅಭಿವೃದ್ಧಿಗೆ 1.50 ಲಕ್ಷ ಕೋಟಿ ರೂ. ಮೊತ್ತದ ವಿವಿಧ ಮೂಲಸೌಕರ್ಯ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

## ಸಂಘರ್ಷಕ್ಕೆ ಅವಕಾಶವಿಲ್ಲ, ಅಭಿವೃದ್ಧಿಯೇ ಮೂಲಮಂತ್ರ

» ಮೊದಲನೇ ಪುಟದಿಂದ

ರಣಘಟ್ಟಕೆರೆ ತುಂಬಿಸುವ ಯೋಜನೆ, ಕಾಚೇನಹಳ್ಳಿ ಏತ ನೀರಾವರಿ ಮೂರನೇ ಹಂತ, ರಂಗೇನಹಳ್ಳಿ ಏತ ನೀರಾವರಿ, ದುದ್ದ-ಶಾಂತಿಗ್ರಾಮ ಹಾಗೂ ಹಿರೀಸಾವೆ ಹೋಬಳಿ ಕೆರೆ ತುಂಬಿಸುವಯೋಜನೆಗಳನ್ನೂ ಶೀಘ್ರ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದರು.

**ಕಾಡಾನೆ ಸಮಸ್ಯೆಗೆ ವೈಜ್ಞಾನಿಕ ಪರಿಹಾರ**

ಜಿಲ್ಲೆಯ ಕಾಡಾನೆ ಸಮಸ್ಯೆ ಗಂಭೀರವಾಗಿರುವುದು ಸರ್ಕಾರದ ಗಮನದಲ್ಲಿದೆ. ಆನೆಗಳಿಗೆ ಅಗತ್ಯವಾದ ಬಿದಿರು ಸೇರಿ ಆಹಾರ ಮೂಲಗಳನ್ನು ಕಾಡಿನಲ್ಲೇ ಬೆಳೆಸುವ ಬಗ್ಗೆ ಗಮನ ಹರಿಸ ಬೇಕು. ಆನೆಗಳ ಸಂತತಿ ಹೆಚ್ಚಾಗಿರುವ ಹಿನ್ನಲೆ ಮಾನವ-ಆನೆ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ವೈಜ್ಞಾನಿಕ ಸಂಶೋಧನೆ ಅಗತ್ಯವಿದೆ. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ತಜ್ಞರ ಅಭಿಪ್ರಾಯ ಪಡೆದು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದರು.

ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್‌ಕುಮಾರ್, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಕಾಂಗ್ರೆಸ್ ಮುಖಂಡ ಬನವಾಸೆ ರಂಗಸ್ವಾಮಿ, ಜಿಲ್ಲಾ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ಆರ್. ಕೆಂಚೇಗೌಡ ಉಪಸ್ಥಿತರಿದ್ದರು.

## ಸ್ವಾವಲಂಬಿ ಭಾರತ ವಿಶ್ವಕ್ಕೆ ಮಾದರಿ

» ಮೊದಲನೇ ಪುಟದಿಂದ

ಗೀಜಿಹಳ್ಳಿ ಧರ್ಮಶೇಖರ್, ಜಿಲ್ಲಾ ದಿಶಾ ಸಮಿತಿ ಸದಸ್ಯೆ ಮಂಜುಳಾ ಚಂದ್ರನಾಯ್ಕ, ಗಂಡಸಿ ಕಮಲಮ್ಮ, ಡಿವೈಎಸ್ಪಿ ಗೋಪಿ, ತಾಲ್ಲೂಕು ಪಂಚಾಯಿತಿ ಇಒ ಗಂಗಣ್ಣ, ಬಿಇಒ ವಸಂತ ಕುಮಾರ್, ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ಕ್ಷೇತ್ರ ಸಮನ್ವಯಾಧಿಕಾರಿ ಕುಮಾರ್ ಭಾಗವಹಿಸಿದ್ದರು.

**ಆಕರ್ಷಕ ಪಥಸಂಚಲನ**

ನಗರ ಠಾಣೆಯ ಉಪನಿರೀಕ್ಷಕ ದಿಲೀಪ್ ಕುಮಾರ್ ನೇತೃತ್ವದಲ್ಲಿ ಪೊಲೀಸ್, ಗೃಹರಕ್ಷಕ ದಳ, ಎನ್‌ಸಿಸಿ, ಪೌರಕಾರ್ಮಿಕರು ಸೇರಿ ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಂದ ನಡೆದ ಪಥಸಂಚಲನ ಸಾರ್ವಜನಿಕರ ಗಮನ ಸೆಳೆಯಿತು. ವಿದ್ಯಾರ್ಥಿಗಳು, ನಿವೃತ್ತ ಯೋಧರು ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಗೌರವಿಸಿ ಪುರಸ್ಕಾರ ನೀಡಲಾಯಿತು. ವಿವಿಧ ಶಾಲೆಗಳ ಮಕ್ಕಳಿಂದ ನಡೆದ ಸ್ವಾತಂತ್ರ್ಯ ಹೋರಾಟದ ರೂಪಕ ನೃತ್ಯ ಗಮನ ಸೆಳೆಯಿತು.

### ಅರಕಲಗೂಡು ತಾಲ್ಲೂಕಿನಲ್ಲಿ ವಾಡಿಕೆಗಿಂತ ಶೇ.43ರಷ್ಟು ಮಳೆ ಕೊರತೆ

## ಬರಪೀಡಿತ ಎಂದು ಘೋಷಿಸಿ: ಶಾಸಕ ಎ.ಮಂಜು

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನಲ್ಲಿ ವಾಡಿಕೆಗಿಂತ ಶೇ.43ರಷ್ಟು ಮಳೆ ಕೊರತೆಯಾಗಿದ್ದು, ಮುಸುಕಿನ ಜೋಳಕ್ಕೆ ಬಿಳಿ ರೋಗ ಬಾಧಿಸಿ ರೈತರು ಅಪಾರ ನಷ್ಟ ಅನುಭವಿಸುತ್ತಿರುವ ಹಿನ್ನಲೆಯಲ್ಲಿ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಬೇಕು ಎಂದು ಶಾಸಕ ಎ. ಮಂಜು ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಈ ಬಾರಿ ಮಳೆ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಇದರಿಂದ ಬಿತ್ತನೆ ಕಾರ್ಯಕ್ಕೂ ತೀವ್ರ ಹಿನ್ನಡೆಯಾಗಿದೆ. ತಾಲ್ಲೂಕಿನಲ್ಲಿ ಒಟ್ಟು 47,242 ಎಕರೆ ಬಿತ್ತನೆ ಗುರಿ ಹೊಂದಲಾಗಿದ್ದರೂ, ಇದುವರೆಗೆ ಕೇವಲ 21,314 ಎಕರೆ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ. ಬಿತ್ತನೆಯಾದ ಮುಸುಕಿನ ಜೋಳಕ್ಕೆ ಬಿಳಿ ರೋಗ ಕಾಣಿಸಿಕೊಂಡಿದ್ದು, ರೈತರು ಬೆಳೆ ನಷ್ಟದಿಂದ ಸಂಕಷ್ಟಕ್ಕೆ



ಸಿಲುಕಿದ್ದಾರೆ. ರೈತರಿಗೆ ವಿತರಿಸಲಾದ ಬಿತ್ತನೆ ಬೀಜದ ಗುಣಮಟ್ಟದ ಬಗ್ಗೆಯೂ ಪ್ರಶ್ನೆಗಳು ಎದುರಾಗಿವೆ. ಬೀಜಗಳನ್ನು ಗುಣಮಟ್ಟ ಹಾಗೂ ರೋಗವಮುಕ್ತ ವಾಗಿರುವುದನ್ನು ಸಮರ್ಪಕವಾಗಿ ಪರೀಕ್ಷಿಸಿದ ಬಳಿಕವೇ ರೈತರಿಗೆ ವಿತರಿಸಬೇಕಿತ್ತು. ಆದರೆ, ಮಂಡ್ಯ ವಿಶ್ವವಿದ್ಯಾಲಯದಲ್ಲಿ ಅಗತ್ಯ ಗುಣಮಟ್ಟ ಪರೀಕ್ಷೆ ನಡೆಸದೆ ಬೀಜ ವಿತರಿಸಿರುವ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಿದರು.

ನಿಗದಿತ ಪ್ರಮಾಣದಲ್ಲಿ ಮಳೆಯಾಗದ ಕಾರಣ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತಿಲ್ಲ. ಅಂತರ್ಜಲ ಮಟ್ಟವೂ ಕುಸಿದಿದ್ದು, ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಆತಂಕವಿದೆ. ಈಗಾಗಲೇ ರೈತರು ಮಳೆ ಕೊರತೆ, ಬೆಳೆ ನಷ್ಟ ಹಾಗೂ ನೀರಿನ ಸಮಸ್ಯೆಯಿಂದ ತೀವ್ರ ಸಂಕಷ್ಟದಲ್ಲಿದ್ದಾರೆ ಎಂದರು.

ಅರಸೀಕೆರೆ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಿರುವ ಮಾದರಿಯಲ್ಲೇ ಅರಕಲಗೂಡು ತಾಲ್ಲೂಕನ್ನೂ ಬರಪೀಡಿತ ಎಂದು ಘೋಷಿಸಬೇಕು. ಬರದಿಂದ ಸಂಕಷ್ಟಕ್ಕೊಳಗಾಗಿರುವ ರೈತರಿಗೆ ಸರ್ಕಾರ ಅಗತ್ಯ ಪರಿಹಾರ ಹಾಗೂ ಸೌಲಭ್ಯಗಳನ್ನು ಒದಗಿಸಬೇಕು. ರೈತರ ಬೆಳೆ ನಷ್ಟವನ್ನು ಸಮರ್ಪಕವಾಗಿ ಸಮೀಕ್ಷೆ ನಡೆಸಿ ಪರಿಹಾರ ನೀಡುವುದರ ಜತೆಗೆ, ಮುಂದಿನ ದಿನಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಅಗತ್ಯ ನೆರವು ನೀಡಬೇಕು ಎಂದು ಮಂಜು ಅವರು ಒತ್ತಾಯಿಸಿದರು.

## ಚ.ರಾ.ಪ. ತಾಲ್ಲೂಕನ್ನು ಬರಗಾಲ ಘೋಷಿಸಿ ರೈತರಿಗೆ ಪರಿಹಾರ ನೀಡಿ

### ರಾಜ್ಯ-ಕೇಂದ್ರ ಸರ್ಕಾರಗಳು ತುರ್ತಾಗಿ ಸ್ಪಂದಿಸಿ: ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪ್ರಕೃತಿ ವಿಕೋಪದಿಂದ ಉಂಟಾಗಿರುವ ಬರಗಾಲದಿಂದಾಗಿ ರೈತರು ಸಂಕಷ್ಟದಲ್ಲಿದ್ದಾರೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತುರ್ತಾಗಿ ಸ್ಪಂದಿಸಿ ರೈತರ ನೆರವಿಗೆ ಧಾವಿಸಬೇಕೆಂದು ಶಾಸಕ ಸಿ.ಎನ್ .ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕು ಕ್ರೀಡಾಂಗಣದಲ್ಲಿ ತಾಲ್ಲೂಕು ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಆಚರಿಸ ಲಾದ 80ನೇ ಸ್ವಾತಂತ್ರ್ಯ ದಿನಾಚರಣೆ ಮಹೋತ್ಸವದಲ್ಲಿ ಅಧ್ಯಕ್ಷಿಯ ನುಡಿಗಳನ್ನಾಡಿದ ಅವರು, ಮಳೆ ಕೊರತೆಯಿಂದ ತಾಲ್ಲೂಕಿನಲ್ಲಿ ಮುಂಗಾರು ಬೆಳೆಗಳನ್ನು ಬಿತ್ತನೆ ಮಾಡಲು ಸಾಧ್ಯವಾಗಿಲ್ಲ. ಸರ್ಕಾರ ಕೂಡಲೇ ಸಮೀಕ್ಷೆ ನಡೆಸಿ, ತಾಲ್ಲೂಕನ್ನು ಬರ ಪೀಡಿತ ಎಂದು ಘೋಷಿಸಿ ಪರಿಹಾರ ನೀಡಬೇಕು ಎಂದರು.

ಹೇಮಾವತಿ ಜಲಾಶಯದಲ್ಲಿ 23 ಟಿಎಂಸಿ ನೀರು ಸಂಗ್ರಹವಾಗಿದ್ದು, ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರಿನ ಅಭಾವ ತಡೆಗಟ್ಟಲು ಜಾನುವಾರುಗಳಿಗೆ ನೀರು ಕೊರತೆಯಾಗದಂತೆ ಕೂಡಲೆ ನಾಲೆಗಳಿಗೆ ನೀರು ಹರಿಸಿ ಕೆರೆಕಟ್ಟೆಗಳನ್ನು ತುಂಬಿಸಬೇಕೆಂದು ತಿಳಿಸಿದರು.



ಹಲವಾರು ಮಹಾತ್ಮರ ತ್ಯಾಗ, ಬಲಿದಾನದ ಫಲವಾಗಿ ದೇಶವು ಸರ್ವಸ್ವತಂತ್ರವಾಗಿ, ಅಭಿವೃದ್ಧಿಯಲ್ಲಿ ದಾಪುಗಾಲಿಟ್ಟು, ಪ್ರಪಂಚದಲ್ಲೇ ಬಲ್ಯಾಢ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ ಇಂದು ನಮ್ಮ ದೇಶ ಸ್ವಾವಲಂಬಿಯಾಗಿ ಬೆಳೆದಿದ್ದು ಹಲವು ಮೈಲಿಗಲ್ಲುಗಳನ್ನು ಕಂಡಿದೆ. ಆರ್ಥಿಕತೆ, ರಾಜಕೀಯ, ತಂತ್ರಜ್ಞಾನ, ವಿಜ್ಞಾನ, ಮೂಲಸೌಕರ್ಯಗಳು ಹೀಗೆ ಎಲ್ಲಾ ಕ್ಷೇತ್ರ ಗಳಲ್ಲೂ ಸಹ ಅನೇಕ ಸಾಧನೆಗಳಿಗೆ ಸಾಕ್ಷಿಯಾಗಿದೆ ಎಂದು ಬಣ್ಣಿಸಿದರು.

ಇನ್ನೂ 80ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ನೆರವೇರಿಸಿದ ತಾಲ್ಲೂಕು ದಂಡಾಧಿಕಾರಿ ಜಿ.ಎಸ್.ಶಂಕರಪ್ಪ ಧ್ವಜ ಸಂದೇಶ ನೀಡಿ, ಆಗಸ್ಟ್ 15 ಪ್ರತಿಯೊಬ್ಬ ಭಾರತೀಯನ ಹೃದಯದಲ್ಲೂ ದೇಶಭಕ್ತಿಯ ಹೊಸ ಸಂಚಲನವನ್ನು ಮೂಡಿಸುವ ಐತಿಹಾಸಿಕ ದಿನ. 1947ರ ಆಗಸ್ಟ್ 15ರಂದು ನೂರಾರು ವರ್ಷಗಳ ಬ್ರಿಟಿಷ್ ದಾಸ್ಯದ ಸರಪಳಿಯನ್ನು ಕಳಚಿ, ಸ್ವತಂತ್ರ ಭಾರತವಾಗಿ ಹೊರಹೊಮ್ಮಿದ ನಮ್ಮ ದೇಶವಿಂದು 80ನೇ ವರ್ಷದ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿದೆ ಎಂದು ತಿಳಿಸಿದರು.

ಪಥಸಂಚಲನ ತಂಡಗಳು ಧ್ವಜ ವಂದನೆ ಸಲ್ಲಿಸಿದರು. ಈ ಸಂಧರ್ಭದಲ್ಲಿ ವಿಶೇಷ ಚೇತನರಿಗೆ ಪರಿಕರಗಳನ್ನು ವಿತರಿಸಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ.ಬಿ.ಕೆ ಕುಮಾರಸ್ವಾಮಿ, ವಿನೋದ್, ಬಿ.ಎನ್.ದೊರೆಸ್ವಾಮಿ, ಸಿ.ಎಲ್.ಧನಲಕ್ಷ್ಮಿ, ಲತಾ (ತಾಯಮ್ಮ), ಸಿ.ಎಸ್.ಹರೀಶ್ ರಾವುತ್, ಶಂಕರ ಲಿಂಗೇಗೌಡ, ವೈ.ಆರ್.ತಿಪ್ಪೇಗೌಡ, ಮಂಜುನಾಥ ಹಂಚೀಹಳ್ಳಿ, ಕೆ.ನಿಶಾಂಕ್, ಜೆ.ಎನ್.ಮಂಜು, ರಾಘು ಕದಂಬ, ವಿ.ಪಿ.ಪುಟ್ಟರೇವಣ್ಣ, ಮಂಜುನಾಥ, ಸಿದ್ದಾರ್ಥ ಎಂ. ಚಕ್ರವರ್ತಿ, ಎಂ.ಡಿ. ಹರೀಶ್, ದ್ಯಾವಯ್ಯ, ಡಿ.ಬಿ.ನಾಗೇಂದ್ರ ಅವರನ್ನು ಗೌರವಿಸಲಾಯಿತು.

ಮುಖ್ಯಾಧಿಕಾರಿ ಪ್ರಕಾಶ್, ನಗರ ಯೋಜನ ಪ್ರಾಧಿಕಾರದ ಅಧ್ಯಕ್ಷ ಜಿ. ಆರ್.ಮೂರ್ತಿ, ಟಿಎಪಿಸಿಎಂಎಸ್ ಅಧ್ಯಕ್ಷ ವೆಂಕಟೇಶಮೂರ್ತಿ, ಗ್ಯಾರಂಟಿ ಸಮಿತಿ ತಾಲ್ಲೂಕು ಅಧ್ಯಕ್ಷ ಪ್ರಕಾಶ್ ಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಿ. ಎನ್.ಮಂಜುನಾಥ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಹೇಮಂತ್ ಕುಮಾರ್, ಕಸಾಪ ತಾಲ್ಲೂಕು ಅಧ್ಯಕ್ಷ ಹೆಚ್.ಎನ್.ಲೋಕೇಶ್, ಬಿಇಒ ಎಸ್. ಎಸ್.ಸತೀಶ್, ಬಿಆರ್‌ಸಿ ಕೆ.ಎನ್. ಅನಿಲ್, ತಾಲ್ಲೂಕು ದೈಹಿಕ ಪರಿವೀಕ್ಷಕ ಕೆ.ಟಿ.ಆನಂದ್, ತಾಲ್ಲೂಕು ಪಂಚಾಯಿತಿ ಸಿಇಒ ಜಿ.ಆರ್.ಹರೀಶ್, ನಗರ ಠಾಣಾ ವೃತ್ತ ನಿರೀಕ್ಷಕ ರಘುಪತಿ ಸೇರಿ ಪುರಸಭಾ ನಾಮನಿರ್ದೇಶನ ಸದಸ್ಯರು, ಕೆಡಿಪಿ ಸದಸ್ಯರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ದಬ್ಬಾಳಿಕೆ ಮೀರಿ ಬೆಳೆದ ಭಾರತ ಜಗತ್ತಿನ ಬಲಾಢ್ಯ ರಾಷ್ಟ್ರ

### ಆಕರ್ಷಕ ಪಥಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮ



» ಮೊದಲನೇ ಪುಟದಿಂದ

ಜಿಲ್ಲೆಯ ರೈತರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಯಡಿ ರೈತರು ಅತೀ ಹೆಚ್ಚು ಸಂಖ್ಯೆಯಲ್ಲಿ ಬೆಳೆ ವಿಮೆ ನೋಂದಾ ಯಿಸಿಕೊಳ್ಳಲು ರೈತರಿಗೆ ಮನವರಿಕೆ ಮಾಡಿಕೊಡಲು ಅಧಿಕಾರಿಗಳಿಗೆ ಸೂಚಿಸಿದ್ದರಿಂದ 2026-27ನೇ ಸಾಲಿನಲ್ಲಿ ದಾಖಲೆಯ ಮಟ್ಟ ದಲ್ಲಿ ಬೆಳೆ ವಿಮೆಗೆ ರೈತರು ನೋಂದಾಯಿಸಿ ಕೊಂಡಿದ್ದಾರೆ. ಇದುವರೆಗೂ 1,88,661 ಅರ್ಜಿಗಳು ಸ್ವೀಕಾರ ಗೊಂಡಿರುತ್ತವೆ. ಕಳೆದ ಸಾಲಿಗೆ ಹೋಲಿಕೆ ಮಾಡಿದ್ದಲ್ಲಿ ಶೇ.175 ರಷ್ಟು ಪ್ರಗತಿ ಕಂಡುಬಂದಿದೆ ಎಂದು ತಿಳಿಸಿದರು.

ಫಸಲ್ ಬಿಮಾ ಯೋಜನೆಯಡಿ 2025-26ನೇ ಸಾಲಿನಲ್ಲಿ ಬೆಳೆ ವಿಮೆಗೆ ನೊಂದಾಯಿಸಿಕೊಂಡಿದ್ದ 1,09,538 ರೈತರಿಗೆ 6.78 ಕೋಟಿ ರೂ.ಗಳ ಬೆಳೆ ವಿಮಾ ಪರಿಹಾರ ಪಾವತಿಯಾಗಿದೆ. ಪ್ರಸ್ತುತ ಹಂಗಾಮಿನಲ್ಲಿ 1,35,392 ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದಾರೆ ಎಂದು ವಿವರಿಸಿದರು.

ಜಿಲ್ಲೆಯ ಪ್ರಮುಖ ಬೆಳೆಯಾದ ಮೆಕ್ಕೆಜೋಳ ಬಿತ್ತನೆಯು 1,13,719 ಹೆಕ್ಟೇರ್ ಗುರಿಗೆ 75,836 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಒಟ್ಟಾರೆ ಶೇ.66.7 ಆಗಿರುತ್ತದೆ. ಬಿತ್ತನೆಯಾಗಿರುವ ಪ್ರದೇಶದಲ್ಲಿ 45,886 ಹೆಕ್ಟೇರ್ ಪ್ರದೇಶದಲ್ಲಿ ಬಿಳಿಸುಳಿರೋಗದಿಂದ ಬೆಳೆ ಹಾನಿಯಾಗಿದೆ. ಅದಕ್ಕೆ ಪರಿಹಾರ ನೀಡಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

**ಹಾಸನ:** ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಏರ್ಪಡಿಸಿದ್ದ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಆಕರ್ಷಕ ಪಥಸಂಚಲನ, ಅರ್ಥಗರ್ಭಿತ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ಮೊದಲಿಗೆ ಗಣ್ಯರು ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಧ್ವಜಾರೋಹಣ ನೆರವೇರಿಸುತ್ತಿದ್ದಂತೆ ಪೊಲೀಸ್ ಬ್ಯಾಂಡ್‌ನಿಂದ ರಾಷ್ಟ್ರಗೀತೆ ಮೊಳಗಿತು. ವಿದ್ಯಾರ್ಥಿಗಳ ತಂಡ ವಂದೇ ಮಾತರಂ, ನಾಡಗೀತೆ, ರೈತಗೀತೆ ಹಾಡಿತು.

ತದನಂತರ ಕೆಎಸ್‌ಆರ್‌ಪಿ, ಡಿಎಆರ್, ನಾಗರಿಕ ಪೊಲೀಸ್ ತಂಡ, ಮಹಿಳಾ ಪೊಲೀಸ್ ತಂಡ, ಗೃಹ ರಕ್ಷಕ ದಳ, ಅರಣ್ಯ ಇಲಾಖೆ ತಂಡ, ಅಬಕಾರಿ ಇಲಾಖೆ ತಂಡ, ಎನ್‌ಸಿಸಿ, ಸೇವಾದಳ ಹಾಗು ಶಾಲಾ ಮಕ್ಕಳು ಸೇರಿ ಒಟ್ಟು 35ಕ್ಕೂ ಹೆಚ್ಚು ತುಕಡಿಗಳಿಂದ ಆಕರ್ಷಕ ಪಥಸಂಚಲನ ಮೂಡಿಬಂದಿತು.

ವಿವಿಧ ಶಾಲೆಗಳ ಮಕ್ಕಳಿಂದ ಮೂಡಿಬಂದ ಭಾರತ ರಾಷ್ಟ್ರ ಒಂದೇ ಎಂಬ ನೃತ್ಯ ರೂಪಕ ಅತ್ಯಂತ ಸೃಜನಶೀಲತೆಯಿಂದ ಪ್ರಸ್ತುತ ಪಡಿಸುವ ಮೂಲಕ ಜನರ ಮೆಚ್ಚುಗೆಗೆ ಪಾತ್ರವಾಯಿತು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ. ಸ್ವರೂಪ್ ಪ್ರಕಾಶ್, ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶುಭಂ ಶುಕ್ಲಾ, ಡಿಎಫ್‌ಒ ಸೌರಭ್ ಕುಮಾರ್, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಮತ್ತಿತರರು ಇದ್ದರು.



ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಶನಿವಾರ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಆಡಳಿತ ಮಂಡಳಿಯ ನಿರ್ದೇಶಕರು, ಕೃಷಿ ಇಲಾಖೆ ಮತ್ತು ಸಂಘದ ನೌಕರರು, ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

### ಮಹಿಳಾ ಹಾಕಿ ವಿಶ್ವಕಪ್: ಭಾರತ ವನಿತೆಯರಿಗೆ ಚೀನಾ ಸವಾಲು



**ನೆದರ್ಲೆಂಡ್ಸ್:** ಆತ್ಮವಿಶ್ವಾಸಭರಿತ ಭಾರತ ಮಹಿಳಾ ಹಾಕಿ ತಂಡವು ಭಾನುವಾರ ವಿಶ್ವಕಪ್ ಟೂರ್ನಿಯಲ್ಲಿ ತನ್ನ ಅಭಿಯಾನ ಆರಂಭಿಸಲಿದೆ. ಚೀನಾದ ಸವಾಲನ್ನು ಎದುರಿಸಲಿದೆ.

ಭಾರತದ ವನಿತೆಯರು ಡಿ ಗುಂಪಿನಲ್ಲಿ ಕಣಕ್ಕಿಳಿ ಯಲಿದ್ದಾರೆ. ಮೊದಲ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಸಲೀಮಾ ಟೆಟೆ ಬಳಗವು ಚೀನಾದ ಎದುರು ಜಯಿಸು ವುದರೊಂದಿಗೆ ಶುಭಾರಂಭ ಮಾಡುವ ವಿಶ್ವಾಸದಲ್ಲಿದೆ.

ಈ ಗುಂಪಿನಲ್ಲಿ ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ತಂಡಗಳು ಇವೆ. ಹೊಸ ಮಾದರಿಯಲ್ಲಿ ತಂಡಕ್ಕೆ ಒಂದು ಪಂದ್ಯದ ಸೋಲು ಕೂಡ ದುಬಾರಿಯಾಗಬಹುದು. ಆದ್ದರಿಂದ ಪ್ರತಿಯೊಂದು ಹಂತದಲ್ಲಿಯೂ ಎಚ್ಚರಿಕೆಯಿಂದ ಆಡಬೇಕಿದೆ. ಭಾರತ ಮತ್ತು ಚೀನಾ ತಂಡಗಳು ಮುಂದಿನ ತಿಂಗಳು ನಡೆಯುವ ಏಷ್ಯನ್ ಗೇಮ್ಸ್‌ನಲ್ಲಿಯೂ ಮುಖಾಮುಖಿಯಾಗಲಿವೆ.

ನೆದರ್ಲೆಂಡ್ಸ್: ಡಿ ಗುಂಪಿನ ಪಂದ್ಯದಲ್ಲಿ ವೇಲ್ಸ್ ತಂಡವನ್ನು 3-1 ಗೋಲುಗಳಿಂದ ಮಣಿಸಿದ ಭಾರತ ಪುರುಷರ ಹಾಕಿ ತಂಡವು ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಪಂದ್ಯದ ಮೊದಲ ನಿಮಿಷದಿಂದಲೂ ಭಾರತ ತಂಡ ಮೇಲುಗೈ ಸಾಧಿಸಿತ್ತು. ನಾಲ್ಕನೇ ಕ್ವಾರ್ಟರ್‌ನ ಕೊನೆಯಲ್ಲಿ ವೇಲ್ಸ್ ತನ್ನ ಮೊದಲ ಗೋಲು ಗಳಿಸುವ ಮೊದಲು ಭಾರತ 3-0 ಮುನ್ನಡೆ ಕಾಯ್ದುಕೊಂಡಿತ್ತು.

## ಇಂದು ಗುರುಕುಲ ಕ್ರಿಕೆಟ್ ಅಕಾಡೆಮಿ ಉದ್ಘಾಟನೆ




• ಪ್ರಜೋದಯ ವರದಿ

**ಹಾಸನ:** ನಗರದ ಟೈಮ್ಸ್ ಗುರುಕುಲ ಶಾಲಾ ಆವರಣದಲ್ಲಿ ಆ.16 ರಂದು ಗುರುಕುಲ ಕ್ರಿಕೆಟ್ ಅಕಾಡೆಮಿ ಉದ್ಘಾಟನೆ ನೆರವೇರಲಿದೆ ಎಂದು ಪ್ರಾಂಶುಪಾಲರಾದ ಶೈಲಾ ರೈ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟೈಮ್ಸ್ ಗುರುಕುಲ ಶಾಲೆಯ ಸಂಸ್ಥಾಪಕ ಎ.ಬಿ. ಸುರೇಂದ್ರ ಕುಮಾರ್ ಅವರ ಮುಂದಾಳತ್ವದಲ್ಲಿ ಅಕಾಡೆಮಿ ರೂಪುಗೊಂಡಿದೆ. ಗ್ರಾಮೀಣ ಹಾಗು ದೂರದ ಪ್ರದೇಶಗಳಲ್ಲಿರುವ ಕ್ರಿಕೆಟ್ ಪ್ರತಿಭೆಗಳಿಗೆ ಗುಣಮಟ್ಟದ ಹಾಗು ವೈಜ್ಞಾನಿಕ ತರಬೇತಿ ಒದಗಿಸುವ ಉದ್ದೇಶದಿಂದ ಅಕಾಡೆಮಿ ತೆರೆಯಲಾಗಿದೆ ಎಂದರು.

8 ರಿಂದ 18 ವರ್ಷದೊಳಗಿನ ಬಾಲಕ-ಬಾಲಕಿಯರಿಗೆ ಲೆದರ್ ಬಾಲ್ ಕ್ರಿಕೆಟ್ ತರಬೇತಿ ನೀಡಲಾಗುವುದು. ಅನುಭವಿ ತರಬೇತುದಾರರಾದ ಚೈತನ್ಯ ಅವರು ತರಬೇತಿಯ ನೇತೃತ್ವ ವಹಿಸಲಿದ್ದು, ಸುಮಾರು 10 ವರ್ಷಗಳ ಕ್ರಿಕೆಟ್ ಅನುಭವ ಹೊಂದಿದ್ದಾರೆ. ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಅಡಿಯಲ್ಲಿ ಪಂದ್ಯಗಳ ಅಧಿಕೃತ ನಿರ್ವಹಣೆಯಲ್ಲಿ ಅನುಭವ ಹೊಂದಿರುವ ಅವರು ವಿವಿಧ ವಯೋಮಾನದ ಜಿಲ್ಲಾ ತಂಡಗಳಿಗೆ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದಾರೆ ಎಂದರು.

### ಎಐಡಿಎಸ್‌ಒ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಅಭಿಮತ

## ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪುಗೊಳ್ಳಲು ಆದರ್ಶಗಳು ಅಗತ್ಯ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಅವರು ಯಾರನ್ನು ಆದರ್ಶವಾಗಿ ಸ್ವೀಕರಿಸುತ್ತಾರೆಂಬುದು ಅತ್ಯಂತ ಮಹತ್ವದ್ದಾಗಿದೆ. ಸಮಾಜದ ಬದಲಾವಣೆಗಾಗಿ ಹೋರಾಡಿದ ಮಹಾನ್ ವ್ಯಕ್ತಿಗಳ ಜೀವನ, ಹೋರಾಟ ಹಾಗು ವಿಚಾರಗಳನ್ನು ಅರಿತುಕೊಳ್ಳಬೇಕೆಂದು ಎಐಡಿಎಸ್‌ಒ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಅವರು ಹೇಳಿದರು.

ನಗರದ ನೀಲಕಂಠೇಶ್ವರ ಕುರುವಿನ ಶೆಟ್ಟಿ ಸಭಾಂಗಣದಲ್ಲಿ ಎಐಡಿಎಸ್‌ಒ ವತಿಯಿಂದ ಆಯೋಜಿಸಿದ್ದ ಜಿಲ್ಲಾಮಟ್ಟದ ವಿದ್ಯಾರ್ಥಿಗಳ ಶಿಬಿರದಲ್ಲಿ ಯಾರು ನಮಗೆ ಆದರ್ಶವಾಗಬೇಕು ವಿಷಯ ಕುರಿತು ಮಾತನಾಡಿದ ಅವರು, ಇತ್ತೀಚೆಗೆ ಜಂತರ್ ಮಂತರ್‌ನಲ್ಲಿ ನಡೆದ ವಿದ್ಯಾರ್ಥಿ -ಜನ ಚಳುವಳಿ ದೇಶದ ವಿದ್ಯಾರ್ಥಿಗಳಿಗೆ ಹೊಸ ಸ್ಫೂರ್ತಿ ನೀಡಿದೆ. ಅದರ ಪ್ರೇರಣೆಯಿಂದ




ವಿವಿಧ ಪ್ರದೇಶಗಳಲ್ಲಿಯೂ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳ ಮೂಲ ಸೌಕರ್ಯ ಹಾಗು ಅಗತ್ಯ ಸೌಲಭ್ಯಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳು ತಮ್ಮ ಹಕ್ಕುಗಳಿಗಾಗಿ ಪ್ರಶ್ನಿಸುವ ಹಾಗು ಹೋರಾಡುವ ಮನೋಭಾವ ಬೆಳೆಸಿಕೊಳ್ಳುತ್ತಿರುವುದಕ್ಕೆ ಇದು ಸಾಕ್ಷಿಯಾಗಿದೆ ಎಂದರು.

ಯಾರನ್ನು ಆದರ್ಶವಾಗಿ ತೆಗೆದುಕೊಳ್ಳಬೇಕು ಎಂಬ ಪ್ರಶ್ನೆಗೆ ಉತ್ತರ ಹುಡುಕುವಾಗ ಭಗತ್ ಸಿಂಗ್ ಮತ್ತು ನೇತಾಜಿ ಸುಭಾಶ್ ಚಂದ್ರ ಬೋಸ್ ಅವರಂತಹ ಮಹಾನ್ ಹೋರಾಟಗಾರರ ಜೀವನವನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು. ಅವರು ಕೇವಲ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲ, ದೇಶದ ಭವಿಷ್ಯ ಹೇಗಿರಬೇಕೆಂಬುದರ ಬಗ್ಗೆಯೂ ಆಳವಾಗಿ ಚಿಂತಿಸಿ ದ್ದರು. ಭಗತ್ ಸಿಂಗ್ ಕನಸು ಕಂಡಿದ್ದ ಭ್ರಷ್ಟಾಚಾರ ಮುಕ್ತ, ನಿರುದ್ಯೋಗ ಮುಕ್ತ ಸಮಾಜ, ಎಲ್ಲರಿಗೂ ಉಚಿತ ಶಿಕ್ಷಣ ಮತ್ತು ಆರೋಗ್ಯ ಹಾಗೂ ಹೆಣ್ಣುಮಕ್ಕಳು ಘನತೆಯಿಂದ ಬದುಕುವ ಸಮಾಜ ನಿರ್ಮಾಣವಾಗಿದೆಯೇ ಎಂಬ ಪ್ರಶ್ನೆಯನ್ನು ಇಂದಿನ ವಿದ್ಯಾರ್ಥಿಗಳು ತಮ್ಮಲ್ಲಿ ಕೇಳಿಕೊಳ್ಳಬೇಕೆಂದು ಹೇಳಿದರು.

ವಿದ್ಯಾರ್ಥಿಗಳಲ್ಲಿ ಮೌಲ್ಯಗಳು ಕುಸಿಯುತ್ತಿರುವುದು ಹಾಗು ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಮೇಲಿನ ಅತಿಯಾದ ಅವಲಂಬನೆ ಹೆಚ್ಚುತ್ತಿರುವುದರ ಬಗ್ಗೆಯೂ ಕಳವಳ ವ್ಯಕ್ತ ಪಡಿಸಿದ ಅವರು, ಮಹಾನ್ ವ್ಯಕ್ತಿಗಳ ಜೀವನವನ್ನು ಅರಿಯದೆ, ಅವರ ಆದರ್ಶಗಳನ್ನು ಅಳವಡಿಸಿಕೊಳ್ಳದೆ ಹೋದರೆ ವ್ಯಕ್ತಿತ್ವ ವಿಕಸನವು ಕೇವಲ ವೈಯಕ್ತಿಕ ಯಶಸ್ಸಿಗೆ ಸೀಮಿತವಾಗುವ ಅಪಾಯವಿದೆ. ವ್ಯಕ್ತಿತ್ವ ವಿಕಸನವೆಂದರೆ ಕೇವಲ ಹೆಚ್ಚಿನ ಅಂಕಗಳಿಸುವುದು, ಉತ್ತಮ ಉದ್ಯೋಗ ಪಡೆಯುವುದು ಅಥವಾ ವೈಯಕ್ತಿಕವಾಗಿ ಯಶಸ್ವಿಯಾಗುವುದಲ್ಲ. ಸತ್ಯ, ನ್ಯಾಯ, ಸಮಾನತೆ ಮತ್ತು ಮಾನವೀಯತೆಯ ಪರವಾಗಿ ನಿಲ್ಲುವ, ಸಮಾಜದ ಬಗ್ಗೆ ಜವಾಬ್ದಾರಿ ಹೊಂದಿರುವ ವ್ಯಕ್ತಿಯಾಗಿ ರೂಪುಗೊಳ್ಳುವುದೇ ನಿಜವಾದ ವ್ಯಕ್ತಿತ್ವ ವಿಕಸನ ಎಂದು ಹೇಳಿದರು.

ದೇಶದ ಸ್ವಾತಂತ್ರ್ಯವು ಅನೇಕ ಹೋರಾಟಗಾರರು, ಯುವಕರು ಹಾಗು ಸಾಮಾನ್ಯ ಜನರ ತ್ಯಾಗ ಮತ್ತು ಹೋರಾಟದ ಫಲವಾಗಿದೆ. ಆದ್ದರಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ವ್ಯಕ್ತಿಗಳ ಜೀವನವನ್ನು ಕೇವಲ ಜಯಂತಿ ಹಾಗು ಸ್ಮರಣಾ ದಿನಗಳಿಗೆ ಸೀಮಿತಗೊಳಿಸದೆ, ಅವರ ವಿಚಾರಗಳನ್ನು ಅರ್ಥಮಾಡಿಕೊಂಡು ಇಂದಿನ ಸಮಾಜದಲ್ಲಿ ಅವುಗಳ ಪ್ರಸ್ತುತತೆಯನ್ನು ಅರಿಯಬೇಕು ಎಂದು ಕರೆ ನೀಡಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯ ಉಪಾಧ್ಯಕ್ಷ ವಿ. ಎನ್. ರಾಜಶೇಖರ್, ವಿದ್ಯಾರ್ಥಿ ಸಂಘಟನೆಯ ಉಪಾಧ್ಯಕ್ಷೆ ಚಂದ್ರಕಲಾ, ಜಿಲ್ಲಾಧ್ಯಕ್ಷೆ ಚೈತ್ರ, ಜಿಲ್ಲಾ ಕಾರ್ಯದರ್ಶಿ ಸುಷ್ಮಾ, ಜಿಲ್ಲಾ ಉಪಾಧ್ಯಕ್ಷ ಅಭಿಷೇಕ್, ಪದಾಧಿಕಾರಿಗಳಾದ ಮಮತಾ, ಪುರುಷೋತ್ತಮ್, ತಿಲಕ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ಬೇಕಾಗಿದ್ದಾರೆ**

ಹಾಸನ ಪ್ರತಿಷ್ಟಿತ ಮ್ಯಾನ್ ಪವರ್ ಏಜನ್ಸಿಗೆ ಕೆಳಕಂಡ ಅಭ್ಯರ್ಥಿಗಳು ಬೇಕಾಗಿದ್ದಾರೆ.

• ಫೀಲ್ಡ್ ಆಫೀಸರ್ : ಸೆಕ್ಯೂರಿಟಿ ಏಜನ್ಸಿಯಲ್ಲಿ ಕನಿಷ್ಠ 1 ವರ್ಷದ ಅನುಭವ. ವಿದ್ಯಾರ್ಹತೆ - ಪಿ.ಯು.ಸಿ

• ರಿಸೆಪ್ಶನಿಸ್ಟ್ : ಯಾವುದೇ ಕಂಪನಿಯಲ್ಲಿ ಕನಿಷ್ಠ 1 ವರ್ಷದ ಅನುಭವ. ವಿದ್ಯಾರ್ಹತೆ - ಪಿ.ಯು.ಸಿ / ಪದವಿ

• ಡಾಟಾ ಎಂಟ್ರಿ ಆಪರೇಟರ್ : ಯಾವುದೇ ಕಂಪನಿಯಲ್ಲಿ ಕನಿಷ್ಠ 1 ವರ್ಷದ ಅನುಭವ ಮತ್ತು ಎಕ್ಸೆಲ್‌ನಲ್ಲಿ ನೈಪುಣ್ಯತೆ ಅಗತ್ಯ. ವಿದ್ಯಾರ್ಹತೆ - ಪದವಿ

ಆಸಕ್ತರು ಸಂಪರ್ಕಿಸಿ : 8884800050

WE ARE HIRING

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK